# 9

# ದೇವರ ತಾಳ್ಮೆಯು ಮುಗಿದು ಹೋದಾಗ

## (1 ಅರಸು 21)

ನಾವು ದೇವರ ಪ್ರೀತಿ ಮತ್ತು ತಾಳ್ಮೆಯ ಮೇಲಿನ ಪಾಠಗಳನ್ನು ಆನಂದಿಸುತ್ತಿರುತ್ತೇವೆ, ಆದರೆ ನಾವು ದೇವರ ನ್ಯಾಯ ಮತ್ತು ಪವಿತ್ರತೆಯ ಬಗೆಗೆ ಬೋಧಿಸದೆ, ನಾವು ದೇವರ ಸಂಪೂರ್ಣ ಸಂಕಲ್ಪವನ್ನು (ಅಪೊಸ್ತಲರ ಕೃತ್ಯಗಳು 20:27) ಬೋಧಿಸಲಾರೆವು ಇದು ಪಾಪವನ್ನು ಸಹಿಸದ ದೇವರ ಭಾಗವಾಗಿದೆ.

ಜ್ಞಾನೋಕ್ತಿ 29:1ರಲ್ಲಿ "ಬಹಳವಾಗಿ ಗದರಿಸಿದರೂ ತಗ್ಗದವನು ಏಳದ ಹಾಗೆ ಫಕ್ಕನೆ ಮುರಿದು ಬೀಳುವನು" ಎಂದಿದೆ. ಈ ಭಾಗವು ಕರುಣೆಯಿಂದ ಪ್ರಾರಂಭವಾಗುತ್ತದೆ, ಬದಲಾಯಿಸಲು ಮೇಲಿಂದ ಮೇಲೆ ಅವಕಾಶಗಳನ್ನು ಕೊಡಲ್ಪಟ್ಟ ವ್ಯಕ್ತಿಯ ಬಗೆಗೆ ಇಲ್ಲಿ ಚಿತ್ರಿಸಲಾಗಿದೆ, ಆದರೆ ಈ ವ್ಯಕ್ತಿಯು ದೇವರ ಮಾತನ್ನು ಕೇಳುವದನ್ನು ಮೊಂಡುತನದಿಂದ ನಿರಾಕರಿಸಿದನು. ಅಂತಿಮವಾಗಿ ದೇವರ ತಾಳ್ಮೆಯು ಕೊನೆಗೊಳ್ಳುತ್ತದೆ. ಆಗ *"ಒಮ್ಮಲೇ"* ಕಠಿಣಮಾಡಿಕೊಂಡಿದ್ದ ಮನುಷ್ಯನ ಹೃದಯವು ಪರಿಹಾರವನ್ನು ಮೀರಿ ಒಡೆದು ಹೋಗಿರಬಹುದು! ಎಂಥ ಭಯಾನಕ ಸಂಗತಿ![1]

ಬೈಬಲ್ ಈ ತರದ ತತ್ವಗಳ ದೃಷ್ಟಾಂತಗಳಿಂದ ತುಂಬಿದೆ. ಅವಳಿ ನಗರಗಳಾಗ ಸೋದೋಮ್ ಮತ್ತು ಗೋಮರಗಳಿಗೆ ಅನೇಕ ಅವಕಾಶಗಳು ಕೊಡಲ್ಪಟ್ಟವು, ಲೋಟನಂಥ ನೀತಿವಂತ ಮನುಷ್ಯನು ಸೋದೋಮಿಗೆ ಬಂದನು; ಆದರೆ ಅವರು ಅನೈತಿಕತೆಯಲ್ಲಿ ಹೆಚ್ಚು ಹೆಚ್ಚು ಬೆಳೆದರು. ಆದಿಕಾಂಡ 19ರಲ್ಲಿ ಈ ಪಟ್ಟಣದಲ್ಲಿ ನೀತಿಯು ಅಶುದ್ಧವಾಗಿತ್ತು ಮತ್ತು ಕೆಳಕ್ಕಿಳಿಸಲ್ಪಟ್ಟಿತ್ತು ಎಂದಿದೆ. ಅಂತಿಮವಾಗಿ, ದೇವರು "ಇನ್ನು ಸಾಕು" ಎಂದು ಹೇಳಿದನು ಆಗ ಒಮ್ಮಲೇ ಅವರು "ಪರಿಹಾರವನ್ನು ಮೀರಿ ಮುರಿದುಹೋದರು" ದೇವರು ಅವರನ್ನು ಭೂಮಿಯಿಂದ ಅಳಿಸಿಹಾಕಿದನು.[2]

ಇಸ್ರಾಯೇಲ್ಯರ ರಾಜ್ಯ ಮತ್ತು ಯೂದಾಯಗಳೆರಡು ದೇವರ ತಾಳ್ಮೆಯನ್ನು ಅನೇಕ ವರ್ಷಗಳಿಂದ ಪರೀಕ್ಷಿಸಿದವು. ಆದರೂ ದೇವರು ಅವರನ್ನು ಹಿಂದಕ್ಕೆ ಕರೆಯಲು ತನ್ನ ಪ್ರವಾದಿಯನ್ನು ಕಳುಹಿಸಿದನು, "ಅವರು ದೇವಪ್ರೇಷಿತರನ್ನು ಗೇಲಿ ಮಾಡಿ ಆತನ ಮಾತುಗಳನ್ನು ತುಚ್ಚೀಕರಿಸಿ ಆತನ ಪ್ರವಾದಿಗಳನ್ನು ಹಿಯಾಳಿಸಿದ್ದರಿಂದ ಆತನ ಕೋಪಾಗ್ನಿಯು ಆತನ ಪ್ರಜೆಗಳ ಮೇಲೆ ಉರಿಯಹತ್ತಿತು, *ಅದರ ತಾಪವು ಆರಿಹೋಗಲೇ ಇಲ್ಲ*" (2 ಪೂರ್ವಕಾಲವೃತ್ತಾಂತ 36:16; ಒತ್ತಿ ಹೇಳಿದ್ದು ನನ್ನದು). ದೇವರು ಹೇಳಿದ್ದೇನೆಂದರೆ, "ಇಷ್ಟು ಸಾಕು!" ಮತ್ತು ಒಮ್ಮಲೇ ಅವರು ಮುರಿಯಲ್ಪಟ್ಟರು - ಮೊದಲು ಇಸ್ರಾಯೇಲ್ಯರು, ನಂತರ ಯೂದಾಯದವರು.

ದಾನಿಯೇಲ 5 ರಲ್ಲಿಯ ಬೆಲ್ಶಚ್ಚರನನ್ನು ನೆನಪಿಸಿಕೊಳ್ಳುವಾ. ಆತನ ಅತಿಥಿಗಳು ಕುಡಿತದ ಕೂಟದಲ್ಲಿ ತೊಡಗಿದ್ದರು, "ಅವರು ದೇವಾಲಯದ ಪವಿತ್ರ ಪಾತ್ರೆಗಳಿಂದ ಕುಡಿಯುತ್ತಿದ್ದರು, *ಆಗಲೇ* ಒಬ್ಬನ ಕೈಯ ಬೆರಳುಗಳು ಬಂದು ... ಅರಮನೆಯ ಸುಣ್ಣದ ಗೋಡೆಯ ಮೇಲೆ ಬರಹ ಬರೆದವು" (ವಚನ 5; ಒತ್ತಿ ಹೇಳಿದ್ದು ನನ್ನದು): "ಮೆನೇ, ಮೆನೇ, ತೆಕೇಲ್, ಉಫರ್ಸಿನ್ ... ನೀನು ತಕ್ಕಡಿಯಲ್ಲಿ ತೂಗಾಡಿ ಕಡಿಮೆಯಾಗಿ ಕಂಡುಬಂದಿದ್ದೀ" (ವಚನಗಳು 25, 27) ದೇವರು ಹೇಳುತ್ತಾನೆ "ಇನ್ನು ಸಾಕು!" ಅದೇ ರಾತ್ರಿ ಆ ಪಟ್ಟಣವು ಬಿದ್ದುಹೋಯಿತು, ಮತ್ತು ಬೆಲ್ಶಚ್ಚರನು ಸತ್ತುಹೋದನು (ವಚನ 30). ಒಮ್ಮಲೇ, ಆತನು

"ಪರಿಹಾರವನ್ನು ಮೀರಿ ಒಡೆದುಹೋದನು."

ಹೊಸ ಒಡಂಬಡಿಕೆಯಲ್ಲಿ ನಾವು ಹೆರೋದ ಅಗ್ರಿಪ್ಪನ ಕಥೆಯನ್ನು ಓದುತ್ತೇವೆ (ಅಪೊಸ್ತಲರ ಕೃತ್ಯಗಳು 12). ಹೆರೋದನು ಜನರೆದುರು ಮಾತನಾಡಲು ನಿಂತನು. ಜೋಸ್ಫಸ್‌ನು ಆತನು ಬೆಳ್ಳಿಯಗೆರೆಯಿರುವ ಬಟ್ಟೆಯನ್ನು ಧರಿಸಿದ್ದನು. ಮುಂಜಾನೆಯ ಸೂರ್ಯನ ಕಿರಣಗಳಿಂದ ಹೆರೋದನು ಹೊಳೆಯುತ್ತಿದ್ದನು ಎಂದು ಹೇಳುತ್ತಾನೆ. ಜನರು "ಇದು ದೇವರ ನುಡಿ ಎಂದು ಆರ್ಭಟಿಸಿದರು ... !" (ವಚನ 22). ಹೆರೋದನು ಆ ಹೊಗಳಿಕೆಯನ್ನು ಒಪ್ಪಿಕೊಂಡಿದ್ದನು, ಮತ್ತು ದೇವರು ಹೇಳಿದನು "ಇದು ಸಾಕು!" ಅಪೊಸ್ತಲರ ಕೃತ್ಯಗಳು 12:23 ಹೇಳುವುದೇನೆಂದರೆ "ಆ ಘನವನ್ನು ಅವನು ದೇವರಿಗೆ ಸಲ್ಲಿಸದೆ ಹೋದದರಿಂದ ಕರ್ತನ ದೂತನು ಆ *ಕ್ಷಣದಲ್ಲೇ* ಅವನನ್ನು ಬಡಿದನು." (ಒತ್ತಿ ಹೇಳಿದ್ದು ನನ್ನದು.) ಜೋಸ್ಫಸ್‌ನು ಹೇಳುವುದೇನೆಂದರೆ ಹೆರೋದನು ತನ್ನ ಹೊಟ್ಟೆಯಲ್ಲಿ ಭಯಂಕರವಾದ ನೋವನ್ನು ಇಮ್ಮಡಿಯಾಗಿ ಹೊಂದಿದನು. ಆತನನ್ನು ಆತನ ಹಾಸಿಗೆಯಲ್ಲಿ ಹೊತ್ತೊಯ್ಯದರು, ಆತನು ಐದುದಿನಗಳಿಂದ ನೋವನ್ನು ತಾಳಿಕೊಳ್ಳಲಾರದೆ ಆತನು ಸತ್ತನು (ವಚನ 23ಬಿ). ಬೈಬಲ್ ಹೇಳುವುದೇನೆಂದರೆ "ಆತನು ಹುಳುಬಿದ್ದು ಸತ್ತನು" ಎಂದಿದೆ.

ಇನ್ನೊಂದು ದೃಷ್ಟಾಂತವನ್ನು ಕೊಡಬಹುದು.[3] ಇದು ದೃಷ್ಟಾಂತವಲ್ಲ ಇಲ್ಲ, ಹೇಗೋ ಇದು ಆಹಾಬ ಮತ್ತು ಈಜಬೇಲರಗಿಂತಲೂ ಬಲು ಶಕ್ತಿಯುತವಾದುದ್ದು. ಆಹಾಬ ಮತ್ತು ಈಜಬೇಲರಿಗೆ ದೇವರನ್ನು ಅರಿತುಕೊಳ್ಳುವ ಮತ್ತು ತಮ್ಮ ಕೆಟ್ಟ ಮಾರ್ಗಗಳಿಂದ ತಿರುಗಿಕೊಳ್ಳುವ, ಅವಕಾಶಗಳ ಮೇಲೆ ಅವಕಾಶಗಳು ಇದ್ದವು, ಆದರೆ ಅವರು ಹಾಗೆ ಮಾಡಲಿಲ್ಲ. ಮೊದಲ ಅರಸು 21 ಅವರ ಗುಣಲಕ್ಷಣಗಳಿಗೆ ತಕ್ಕದಾದ ಅಧ್ಯಾಯವಾಗಿದೆ. ವೇದ ಭಾಗದಲ್ಲಿಯೇ ಹೇಯವಾದ ಒಂದು ಕೃತ್ಯವನ್ನು ನಾವು ಇಲ್ಲಿ ಕಣುತ್ತೇವೆ. ದೇವರ ತಾಳ್ಮೆಯು ಮುಗಿದುಹೋಗಿಬಿಡುವುದನ್ನು ನಾವು ಕಾಣುತ್ತೇವೆ "ಇನ್ನು ಸಾಕು!" ಎಂದು.

## ನಾಬೋತನ ವಿರುದ್ಧದ ಪಾಪ (21:1-16)

ಅಧ್ಯಾಯ 21 ಪ್ರಾರಂಭವಾಗುವದು "ಅನಂತರ ಸಂಭವಿಸಿದ್ದೇನೆಂದರೆ" ಎಂದು. ಅದು ಎಲೀಯನು ಆ ಪ್ರದೇಶವನ್ನು ಬಿಟ್ಟು ಹೋದ ನಂತರದಲ್ಲಿ ಆಹಾಬನು ತನ್ನ ದೈನಂದಿನ ಚಟುವಟಿಕೆಗಳಿಗೆ ಹಿಂತಿರುಗಿದನು. ಆಹಾಬನು ಕರ್ಮೆಲ್ ಬೆಟ್ಟದಿಂದ ಹಿಂತಿರುಗಿದ ನಂತರ ಭಯಗ್ರಸ್ತನಾಗಿದ್ದನು; ಆದರೆ ಈಜಬೇಲಳು ಎಲೀಯನನ್ನು ಬೆದರಿಸಿದಾಗ, ಎಲೀಯನು ಓಡಿಹೋದನು. ಆಹಾಬನಿಗೆ ಆ ಸಮಯದಿಂದಲೂ ಆತನ ಬಗ್ಗೆ ಏನೂ ಕೇಳಿಬರಲಿಲ್ಲ, ಹೀಗೆ ಆಹಾಬನು ತನ್ನದೇ ಆದ ಮಾರ್ಗಕ್ಕೆ ಹಿಂದಿರುಗಿದನು. ಅಧ್ಯಾಯ 19ರಲ್ಲಿ ಇಸ್ರಾಯೇಲ್ಯರು ವಿಜಯವನ್ನು ಸಂಪಾದಿಸಿಕೊಡಂತಹ ಸಿರಿಯಾದ ವಿರುದ್ಧ ಎರಡು ಯುದ್ಧಗಳನ್ನು ಆತನು ಮಾಡಿದ್ದನ್ನು ಎಂದು ನಾವು ಓದುತ್ತೇವೆ (ಮತ್ತು ಆಹಾಬನು ಸಿರಿಯಾದ ರಾಜನನ್ನು ಸ್ವತಂತ್ರ್ಯವಾಗಿ ಬಿಟ್ಟದ್ದಕ್ಕೆ ದೂಷಣೆಯನ್ನು ಹೊಂದಿದ ನಂತರದ್ದು).[4]

ಆನಂತರ ಸಂಭವಿಸಿದ್ದೇನೆಂದರೆ ಇಜ್ರೇಲಿನಲ್ಲಿ ಸಮಾರ್ಯದ "ಅರಸನಾದ ಆಹಾಬನ ಅರಮನೆಯ ಹತ್ತಿರ ಇಜ್ರೇಲಿನವನಾದ ನಾಬೋತನೆಂಬವನ ದ್ರಾಕ್ಷೆ ತೋಟವಿತ್ತು" (ವಚನ 1). ನಾಬೋತನು ಒಬ್ಬ ಒಳ್ಳೆಯ ದೇವರ ಭಕ್ತನಾಗಿದ್ದನು. ಆತನು ಇಜ್ರೇಲಿನ ಆಹಾಬನ ಅರಮನೆಯ ಹತ್ತಿರ ಒಂದು ದ್ರಾಕ್ಷೆ ತೋಟವನ್ನು ಹೊಂದಿದ್ದನು. ಇಸ್ರಾಯೇಲ್ಯರ ರಾಜಧಾನಿಯು ಸಮಾರ್ಯ, ಅದು ದಕ್ಷಿಣದಿಂದ[5] ಕೆಲ ಮೈಲಿಗಳವರೆಗೆ ದೂರದಲ್ಲಿ ಇತ್ತು, ಆದರೆ ಆಹಾಬನು ಸಹ ಇಜ್ರೇಲಿನಲ್ಲಿ ಸುಂದರವಾದ ಅರಮನೆಯನ್ನು ಹೊಂದಿದ್ದನು. ಆಹಾಬನ ಉಳಿದ ಚರಿತ್ರೆಯೂ ಮತ್ತು ಅವನು ಕಟ್ಟಿಸಿದ ಕಟ್ಟಡಗಳು ಆತನ ಸಾಮರ್ಥವನ್ನು ಹೇಳುತ್ತವೆ (1 ಅರಸು 22:39). ಇಜ್ರೇಲಿನ ಅರಮನೆಯ ನಿಸ್ಸಂಶಯವಾಗಿ ನೆಲವು ಹುಲ್ಲು ಹಾಸಿಗೆಯಿಂದ ಅಲಂಕೃತಗೊಂಡಿರಬಹುದು, ಸುಂದರವಾದ

ಹೂವುಗಳಿಂದ ಪೊದೆಗಳಿಂದ ನೇರವಾದ ಮರಗಳಿಂದ ಅಂದವಾಗಿ ಇಡಲ್ಪಟ್ಟಿರಬಹುದು. ಒಂದು ಸಂಗತಿಯು ಇಲ್ಲಿ ಕಾಣೆಯಾಗಿತ್ತು. ಆಹಾಬನ ಮೇಜಿನ ಮೇಲೆ ತಾಜಾ ಸೊಪ್ಪುಗಳನ್ನು ಮತ್ತು ತರಕಾರಿಗಳನ್ನು ಇಡಲು ಆಗುವಂತವುಗಳನ್ನು ಬೆಳೆಯನ್ನು ಬೆಳೆಯಲು ಆತನಿಗೆ ಚಿಕ್ಕ ಜಾಗೆಯು ಇರಲಿಲ್ಲ. ಒಂದು ದಿನ ಆತನು ತನ್ನ ಕಿಟಕಿಯಿಂದ ಹೊರಗೆ ನೋಡುತ್ತಿದ್ದಾಗ ನಾಬೋತನ ದ್ರಾಕ್ಷೇತೋಟ ಆತನ ಕಣ್ಣಿಗೆ ಬಿತ್ತು. ಆಹಾಬನಿಗೆ ಅದನ್ನು ಪಡೆಯಲೇಬೇಕೆಂದು ಅನಿಸಿತು.

> ಆಹಾಬನು ನಾಬೋತನಿಗೆ - ನಿನ್ನ ದ್ರಾಕ್ಷೇ ತೋಟವನ್ನು ನನಗೆ ಕೊಡು; ಅದು ನನ್ನ ಅರಮನೆಯ ಹತ್ತಿರ ಇರುವುದರಿಂದ ಅದನ್ನು ಕಾಯಿಪಲ್ಯದ ತೋಟವನ್ನಾಗಿ ಮಾಡಿಕೊಳ್ಳುವೆನು; ಅದಕ್ಕೆ ಬದಲಾಗಿ ನಿನಗೆ ಅದಕ್ಕಿಂತ ಉತ್ತಮವಾದ ತೋಟವನ್ನು ಕೊಡುತ್ತೇನೆ; ಅದು ಬೇಡವಾದರೆ ಕ್ರಯವನ್ನು ಕೊಡುತ್ತೇನೆ ಎಂದು ಹೇಳಿದನು (ವಚನ 2).

ಮೊದಲ ನೋಟದಲ್ಲಿ, ನಾವು ಆಹಾಬನ ವಿಚಾರವು ಸರಿಯಾಗಿದೆ ಎಂದು ನಾವು ಯೋಚಿಸಬಹುದು, ಆದರೆ ಇದು ದೇವರ ಚಿತ್ತಕ್ಕೆ ವಿರುದ್ಧವಾದುದನ್ನು ಒಳಗೊಂಡಿದೆ. ಇಸ್ರಾಯೇಲ್ಯರು ವಾಗ್ದತ್ತ ಸ್ಥಳಕ್ಕೆ ಹೋದಾಗ ಆಯಾ ಕುಲ ಮತ್ತು ಕುಟುಂಬಗಳಿಗೆ ಭೂಮಿಯು ಹಂಚಲ್ಪಟ್ಟಿತ್ತು. ಆ ನೆಲವು ಆ ಕುಟುಂಬದವರಲ್ಲಿಯೇ ಇರಬೇಕಿತ್ತು (ಯಾಜಕಕಾಂಡ 25:24-34).[6]

"ಅದಕ್ಕೆ ನಾಬೋತನು ನಾನು ಪಿತ್ರಾರ್ಜಿತ ಸ್ವಾಸ್ತ್ಯವನ್ನು ನಿನಗೆ ಮಾರದಂತೆ ಯೆಹೋವನು ನನ್ನನ್ನು ತಡೆಯಲಿ ಎಂದು ಮಾರುತ್ತರ ಕೊಟ್ಟನು" (ವಚನ 3). ನಾಬೋತನಿಗೆ ಈ ತೋಟವನ್ನು ಮಾರದಂತಿರಲು ಅನೇಕ ಕಾರಣಗಳಿರಬಹುದು. ಈ ದ್ರಾಕ್ಷೇ ತೋಟವು ಆತನಿಗೆ ಸುಂದರವಾದ ನೆನಪುಗಳಿಂದ ಕೂಡಿರಬಹುದು. ಆತನ ತಂದೆಯು ಈ ದ್ರಾಕ್ಷೇ ತೊಟದಲ್ಲಿ ಕೆಲಸಮಾಡಿರಬಹುದು ... ಆತನಿಗಿಂತ ಆತನ ತಂದೆ ... ಮತ್ತು ಆತನಿಗಿಂತ ಮೊದಲು ಆತನ ತಂದೆಯು ಕೆಲಸ ಮಾಡಿದ್ದರು. ನಾನು ಹೀಗೆ ನೆನಸುತ್ತೇನೆ, ನಾಬೋತನು ಚಿಕ್ಕವನಾಗಿದ್ದಾಗ, ಆತನು ಈ ದ್ರಾಕ್ಷೇಯ ಎಲೆಯ ನೆರಳಲ್ಲಿ ಸುತ್ತುತ್ತಾ ಕಲೆಯುತ್ತಾ ಆಟವಾಡಿರಬಹುದು, ಮತ್ತು ದ್ರಾಕ್ಷೇ ಹಣ್ಣುಗಳನ್ನು ಅವುಗಳ ಆ ನೀಲ ರಸವು ಆತನ ಕೆನ್ನೆಯ ಮೇಲೆ ಹರಿಯುವ ತನಕ ತಿಂದಿರಬಹುದು. ಈಗ ಆತನು ಅದೇ ದ್ರಾಕ್ಷೇ ತೋಟದಲ್ಲಿ ತನ್ನ ಮಕ್ಕಳೊಡನೆ ಕೆಲಸಮಾಡುತ್ತಿದ್ದಾನೆ. ನಾಬೋತನು ಅದನ್ನು ಮಾರದಿರುವುದಕ್ಕೆ ಕಾರಣವೇ ನೆಂದರೆ ದೇವರು "ನೀವು ಇದನ್ನು ಯಾರಿಗೂ ಕೊಡಬಾರದು ಮತ್ತು ಮಾರಲೂ ಬಾರದು!" ಎಂದು ಹೇಳಿದ್ದರಿಂದಲೇ, ನಾಬೋತನು ಕರ್ತನಿಗೆ ವಿಧೇಯನಾಗುವಲ್ಲಿ ಹಿಂಜರಿಯುವವನಾಗಿರಲಿಲ್ಲ. ಈತನು ಬಾಳನಿಗೆ ಅಡ್ಡಬಿದ್ದು ಆರಾಧಿಸದ ಏಳುಸಾವಿರ ಜನರಲ್ಲಿ ಒಬ್ಬನಾಗಿದ್ದನು (ವಚನ 3)!

ಆಹಾಬನು ತನ್ನ ಅರಮನೆಗೆ "ಮಂಕಾಗಿ, ಮತ್ತು ಕೋಪದಿಂದ" ಬಂದನು:

> ನನ್ನ ಪಿತ್ರಾರ್ಜಿತ ಸ್ವಾಸ್ತ್ಯವನ್ನು ನಿನಗೆ ಕೊಡುವುದಿಲ್ಲವೆಂದು ನಾಬೋತನು ಹೇಳಿದದರಿಂದ ಆಹಾಬನು ಸಿಟ್ಟಿನಿಂದ ಗಂಟುಮೋರೆ ಮಾಡಿಕೊಂಡು ಮನೆಗೆ ಹೋಗಿ ಊಟಮಾಡಲೊಲ್ಲದೇ ಮಂಚದ ಮೇಲೆ ಮಲಗಿ ಗೋಡೆಯ ಕಡೆಗೆ ಮುಖತಿರುಗಿಸಿಕೊಂಡನು (ವಚನ 4).

ಆಹಾಬನು ತನ್ನಲ್ಲಿನ ನಕಲಿ ಒಡವೆಯನ್ನು ಕೊಡಲು ನಿರಾಕರಿಸುವ ಚಿಕ್ಕಮಗುವಿನಂತೆ ಮುಖವನ್ನು ಗಂಟು ಮಾಡಿಕೊಂಡು ಮಲಗಿದನು. ಅರಸನ ಸ್ಥಾನದಲ್ಲಿ ಇರುವ ಈ ಮನುಷ್ಯನಿಗೆ ಈ ಪರಿಯು ಸಲ್ಲದು. ಆ ಸನ್ನಿವೇಶವನ್ನು ಊಹಿಸಿರಿ: ಬಹುಶಃ

ಆಹಾಬನು ದಂತದ ಅರಮನೆಯಲ್ಲಿ ಇರಬಹುದು.[7] ಆತನು ದಂತದ ಹಾಸಿಗೆಯಲ್ಲಿಯೇ ಮಲಗಿರಬಹುದು.[8] ಗೋಡೆಗಳು ದಂತಗಳಿಂದ ಹೊದಗಿಸಿರಬೇಕು.[9] ಆತನು ಸಂಪತ್ತು ಮತ್ತು ಸಮೃದ್ಧಿಗಳಿಂದ ಸುತ್ತುವರೆಯಲ್ಪಟ್ಟಿದ್ದನು, ಆದರೂ ಆತನು ಒಂದು ಕ್ಷುಲ್ಲಕ ಸಂಗತಿಗಾಗಿ ಮುಖ ಊದಿಸಿಕೊಂಡನು. ಆತನು "ಬೇಟೆಯು ದಿಬ್ಬದಿಂದ ಸುತ್ತುವರೆದಿದ್ದರೂ ಪಾಲಿವಾಳದ ಆಹಾರದ ತುಣಿಕಿಗಾಗಿ ಮುಖಮುರಿದುಕೊಂಡ ಹದ್ದಿನಂತಿದ್ದಾನೆ." ಆತನು ಸುತ್ತಲೂ ಪ್ರಾಣಿಗಳ ಕಳೆಬರವನ್ನು ಹೊಂದಿದ್ದರು ಇಲಿಯ ಬಾಯಲ್ಲಿನ ಚೀಸ್‌ಗಾಗಿ ಮುಖಊದಿಸಿಕೊಂಡ ಸಿಂಹದಂತಿದ್ದಾನೆ.

ಈಜಬೇಲಳು ಆತನನ್ನು ಊಟದ ಕೋಣೆಯಲ್ಲಿ ಕಾಣಲಿಲ್ಲ. ಬಹುಶಃ ಆಕೆಯು ಕಳುಹಿಸಿದ ಊಟದ ತಟ್ಟೆಯು ಊಟಮಾಡದೇ ವಾಪಸ್ಸು ಬಂದಿರಬೇಕು. ಮನೆಯ ಹಿರಿಯಳಾದ ಈಕೆ ಏನು ತಪ್ಪು ನಡೆದಿದೆ ಎಂದು ಕಂಡುಹಿಡಿಯಲು ಹೋದಳು. ಅವಳು ಆತನ ಕೋಣೆಗ ಬಂದಳು. ಬಹುಶಃ ಆಕೆಯು ಮಾಡಿದ ಮೊದಲ ಕೆಸವೇನೆಂದರೆ ಕೈಯನ್ನು ಆತನು ಹುಬ್ಬಿನ ಮೇಲೆ ಕೈಯಿಟ್ಟಳು ಆತನಿಗೆ ಜ್ವರವಿರಲಿಲ್ಲ. ಆಕೆಯು ಆತನಿಗೆ "ನೀನು ಯಾಕೆ ಊಟವನ್ನು ಮಾಡುವುದಿಲ್ಲ? ನಿನಗೆ ಯಾವ ಚಿಂತೆಯು ಇರುತ್ತದೆ" (ವಚನ 5) ಎಂದು ಕೇಳಿದಳು. ಆತನು ಮೇಲುವಾದ ಧ್ವನಿಯಲ್ಲಿ ಹೇಳಿದನು:

> ನಾನು ಇಜ್ರೇಲಿನವನಾದ ನಾಬೋತನಿಗೆ - ನಿನ್ನ ದ್ರಾಕ್ಷೇತೋಟವನ್ನು ನನಗೆ ಮಾರಿಬಿಡು; "ಹಣಬೇಡವಾದರೆ ನಿನಗೆ ಬೇರೊಂದು ದ್ರಾಕ್ಷೆತೋಟವನ್ನು ಕೊಡುತ್ತೇನೆ ಎಂಬುದಾಗಿ ಹೇಳಿದೆನು. ಆದರೆ ಅವನು ಕೊಡುವುದಿಲ್ಲ ಎಂದನು" (ವಚನ 6).

ಆಹಾಬನು ನಾಬೋತನು ಹೇಳಿದ ದೇವರು ನಿಷೇಧಿಸಿದ ಸಂಗತಿಯ ಬಗೆಗೆ ಸೂಚಿಸಲಿಲ್ಲ. ಆ ಬಗೆಗೆ ಆಹಾಬನಿಗೆ ಯಾವ ಲಕ್ಷವೂ ಇರಲಿಲ್ಲ. ಆತನಿಗಿರುವ ಒಂದೇ ಒಂದು ಸಂಗತಿ ಎಂದರೆ ಆತನು ತನಗೆ ಅಡ್ಡಬರುತ್ತಿದ್ದಾನೆ ಎಂಬುದೆ.

ಈಜಬೇಲಳು ಅವನಿಗೆ "ನೀನು ಇಸ್ರಾಯೇಲ್ಯರ ಅರಸನೋ?" (ವಚನ 7ಎ) ಎಂದು ಛೇಡಿಸುತ್ತಾಳೆ. ಏನೇ ಆಗಲಿ, ಆತನು ನಿಜವಾಗಿ ಇಸ್ರಾಯೇಲ್ಯರನ್ನು ಆಳುತ್ತಿರಲಿಲ್ಲ - ಈಜಬೇಲಳು ಆಳುತ್ತಿದ್ದಳು - ಆದರೆ ಅವಳು "ನಿನಗೆ ಬೇಕಾದುದನ್ನು ನೀನು ಪಡೆಯದಿದ್ದರೆ ನೀನು ಅರಸನಾಗಿರುವುದರಲ್ಲಿ ಯಾವುದೇ ಪುರುಶಾರ್ಥವೂ ಇಲ್ಲ" ಎಂದು ಹೇಳುತ್ತಿದ್ದಾನೆ. ನಂತರ ಆಕೆಯ ಅವನಿಗೆ "ಎದ್ದು ಊಟಮಾಡಿ ಸಂತೋಷದಿಂದಿರು; ನಾನು ಇಜ್ರೇಲಿನವನಾದ ನಾಬೋತನ ದ್ರಾಕ್ಷೇತೋಟವನ್ನು ನಿನಗೆ ಕೊಡುತ್ತೇನೆ" (ವಚನ 7ಬಿ) ಎಂದು ಸಾಮಾಧಾನಿಸಿದಳು. "ನಾನು ನಿನಗೆ ದ್ರಾಕ್ಷೆ ತೋಟವನ್ನು *ಕೊಡಿಸುತ್ತೇನೆ.* ನೀನು ಅದನ್ನು ಕೊಳ್ಳಲಿರುವಿ; ನಾನು ಅದನ್ನು ನಿನಗೆ ಕೊಡುತ್ತೇನೆ."

ಆಳುವಂತ ಹೆಂಡತಿ ಮತ್ತು ಪುಕ್ಕಲು ಗಂಡನ ಶ್ರೇಷ್ಟ ಚಿತ್ರಣವು ಇಲ್ಲಿದೆ. ಜಾಣೆಯಾದ ಹೆಂಡತಿಗೆ ತಮ್ಮ ಗಂಡನು ನಾಯಕರಾಗಿರಬೇಕಾದರೆ, ಮುಂದಾಳತ್ವವನ್ನು ವಹಿಸಲು ಆತನಿಗೆ ಸ್ಫೂರ್ತಿಯ ಅವಶ್ಯಕತೆಯು ಇದೆ ಎಂದು ಆಕೆಯು ಬಲ್ಲವಳಾಗಿರುತ್ತಾಳೆ. ಇಲ್ಲಿ, ಹೇಗೋ ಗಂಡನು ನಿಷ್ಪ್ರಯೋಜಕನಾದಾಗ ಹೆಂಡತಿಯು ಆ ಸ್ಥಾನವನ್ನು ತೆಗೆದುಕೊಳ್ಳುತ್ತಾಳೆ. ಅವನನ್ನು ಪ್ರೋತ್ಸಾಹಿಸುವುದರ ಬದಲು ಅವನ ಸಮಸ್ಯೆಯನ್ನು ಎದುರಿಸಲು ಮತ್ತು ಅದರೊಡನೆ ವ್ಯವಹರಿಸಲು ಅವಳು ಹೇಳುತ್ತಾಳೆ "ನೀನು ನನಗೆ ದಾರಿಬಿಡು; ನಾನು ಅದನ್ನು ಮಾಡುತ್ತೇನೆ"; ಮತ್ತು ಆತನು ಆಕೆಯು ಮಾಡುತ್ತಾಳೆ ಎಂಬುದನ್ನು ಕೇಳಿ ಸಂತುಷ್ಟನಾದನು.

ಈಗ ನಾವು ಮನುಕುಲದ ಇತಿಹಾಸದ ಕಾಲಾವಧಿಯ ದಾಖಲೆಗಳಲ್ಲಿ ಶೀಲತ ಸಮರದ ವ್ಯವಸ್ಥೆಯೆಡೆಗೆ ನಾವು ಬರುತ್ತೇವೆ. ಒಂದು ವೇಳೆ ಮಾಫಿಯಾ ಜಗತ್ತಿನ ದಣಿಯು ಈ ಯೋಜನೆಯನ್ನು ಯೋಜಿಸಿದ್ದರೆ, ನಾವು ಆಶ್ಚರ್ಯಪಡುತ್ತಿರಲಿಲ್ಲ; ಆದರೆ ಇದು ಮಾಡಲ್ಪಟ್ಟದ್ದು

ದೇವರ ಅಭಿಶಕ್ತನಾದವನೊಬ್ಬವನ ಹೆಸರಿನಿಂದ, ದೇವರ ಜನರ ಅರಸನ ಹೆಸರಿನಿಂದ!

> (ಈಜಬೇಲಳು) ಆಹಾಬನ ಹೆಸರಿನಲ್ಲಿ ಒಂದು ಪತ್ರವನ್ನು ಬರೆದು ಮುದ್ರೆ ಹಾಕಿ ಅದನ್ನು ನಾಬೋತನ ಊರಿನಲ್ಲಿದ್ದ ಎಲ್ಲಾ ಪ್ರಧಾನ ಪುರುಷರಿಗೂ ಹಿರಿಯರಿಗೂ ಕಳುಹಿಸಿದಳು. ಅದರಲ್ಲಿ ಎಲ್ಲರೂ ಉಪವಾಸ ಮಾಡಬೇಕೆಂದು ಪ್ರಕಟಿಸಿ ನಾಬೋತನನ್ನು ನೆರೆದ ಸಭೆಯ ಮುಂದೆ ನಿಲ್ಲಿಸಿರಿ (ವಚನಗಳು 8, 9).

ದೇವರ ನಿಯಮವು ಈ ವ್ಯವಸ್ಥೆಯಲ್ಲಿ ಸಾಧನವಾಗಿ ಬಳಸಲ್ಪಟ್ಟಿತು. ಈಜಬೇಲು ದೇವರ ನಿಯಮವನ್ನು ದ್ವೇಷಿಸುತ್ತಿದ್ದಳು. ಈ ರೀತಿಯಲ್ಲಿ ಯೆಹೋವನ ಧರ್ಮಶಾಸ್ತ್ರವನ್ನು ಅಡ್ಡದಾರಿಗೆ ಎಳೆಯಲು ಇದು ಅವಳ ಕೈಗೆ ಕೊಡಲ್ಪಟ್ಟಿತು. ಮೊದಲನೆಯ ನಿಯಮವು ಉಪವಾಸದಿಂದಿರುವ ಘೋಷಣೆಯಲ್ಲಿ ಅಡ್ಡದಾರಿಗೆ ಎಳೆ ಯಲ್ಪಟ್ಟಿತು. ಉಪವಾಸವು ದೇವರ ಕೋಪವನ್ನು ತಪ್ಪಿಸಿಕೊಳ್ಳಲು ಬಳಸಲಾಗುತ್ತಿದ್ದ ಸಾಧನಾವಾಗಿತ್ತು (2 ಸಮುವೇಲ 21:2; ಯೆಹೋಶುವ 9:11; ಧರ್ಮೋಪದೇಶಕಾಂಡ 21:9).

ಎರಡನೆಯ ನಿಯಮವು ಎಲ್ಲಾ ಜನರು ಒಳಗೊಳ್ಳುವಂತೆ ಸೇರುವುದರ ಮೂಲಕ ಅಡ್ಡದಾರಿಗೆಳೆಯುವದು. ದೇವರು ಎಲ್ಲಾ ಜನರ ಮೇಲೆ ಕೋಪಗೊಂಡಾಗ, ಎಲ್ಲಾ ಜನರು ಉಪವಾಸಮಾಡುವದು ಅವಶ್ಯವಾಗಿದೆ. ನಾಯಕರುಗಳು ಸೇರಿ ಯಾವುದೇ ವ್ಯಕ್ತಿ ಅಪರಾಧದಿಂದ ಪಟ್ಟಣವು ದೋಷದ ಕಾರ್ಮೋಡದಡಿಯಲ್ಲಿದೆ ಎಂದ ನಟಿಸುತ್ತಿದ್ದರು. ಆಕಾನನ ಪ್ರಕರಣದಲ್ಲಿ ಯೆಹೋಶುವನು ಸೈತಾನನನ್ನು ಅಣಕಿಸುವ ರೀತಿಯನ್ನು ನಾವು ನೋಡುತ್ತೇವೆ (ಯೆಹೋಶುವ 7).

ಜೋಸ್ಫಸ್‌ನ ಪ್ರಕಾರ ನಾಬೋತನು ಜನರೆಲ್ಲರಿಂದಲೂ ಗೌರವಕ್ಕೊಳಗಾದವನು. ಆತನು ಜನರ "ಹಿರಿಯನಾಗಿ" ಇದ್ದವನು ಎಂಬುದು ಒಂದು ಗೌರವದ ಸ್ಥಾನವನ್ನು ಸೂಚಿಸುವುದಾಗಿದೆ.

ಈಜಬೇಲಳ ಸೂಚನೆಗಳು ಮುಂದುವರೆದಿದ್ದವು: "ಅವನು ದೇವರನ್ನೂ ಅರಸನನ್ನೂ ಶಪಿಸಿದವನು ಎಂಬುದಾಗಿ ಇಬ್ಬರು ದುಷ್ಟ ಮನುಷ್ಯರಿಂದ[10] ಸಾಕ್ಷಿ ಹೇಳಿಸಿ ಅವನನ್ನು ಹೊರಗೆ ಒಯ್ದು ಕೊಲ್ಲಿರಿ ಎಂದ ಬರೆದಿದ್ದಳು" (ವಚನ 10). ಅವರ ಯೋಜನೆಯಲ್ಲಿ ಯೆಹೋವನ ಮೂರು ನಿಯಮಗಳು ಅಡ್ಡದಾರಿಗೆ ಎಳೆಯಲ್ಪಟ್ಟಿದ್ದವು: (1) ಅಪಾದನೆಯು ಎರಡು ಅಥವಾ ಮೂರು ಸಾಕ್ಷಿಗಳ ಬಾಯಿಂದ ಸಾಬೀತಾಗಬೇಕು (ಅರಣ್ಯಕಾಂಡ 35:30; ಧರ್ಮೋಪದೇಶಕಾಂಡ 17:6; 19:15); (2) ನಿಯಮವು ಹೇಳುವದೇನೆಂದರೆ ದೇವದೂಷಣೆಯು ಮರಣಕ್ಕೊಳಪಡಿಸುವ ಪಾಪದ ಶಿಕ್ಷೆಯಾಗಿದೆ (ದೇವರ ಪ್ರತಿನಿಧಿಯಾದ ಅರಸನನ್ನು ದೂಷಿಸುವದು ದೇವರನ್ನು ದೂಷಿಸಿದಂತೆ ನೋಡಿರಿ ಯಾಜಕಕಾಂಡ 24:15); ಮತ್ತು (3) ದೇವದೂಷಣೆಯ ಪಾಪಕ್ಕೆ ಕಲ್ಲೆಸೆದು ಕೊಲ್ಲುವದು ಒಂದು ಶಿಕ್ಷೆಯಾಗಿತ್ತು (ಯಾಜಕಕಾಂಡ 24:14-16). ಎಂಥ ಸೈತಾನನ ಮನಸ್ಸನ್ನು ಈಜಬೇಲಳು ಹೊಂದಿದ್ದಳು!

ರಾಜ್ಯದ ನೈತಿಕ ಆತ್ಮೀಕ ಸ್ಥಿತಿಯು ವಚನ 11ರಲ್ಲಿ ಕಾಣುವದು (ಈಜಬೇಲಳ ಭಯದೊಂದಿಗೆ ಅದು ರಚಿತವಾಗಿತ್ತು). "ಹೀಗೆ ಪಟ್ಟಣದ ಜನರು, ಹಿರಿಯರು ಮತ್ತು ಆತನು ಪಟ್ಟಣದಲ್ಲಿ ವಾಸಿಸುತ್ತಿದ್ದ ನೀತಿವಂತರು, ಈಜಬೇಲು ತಮಗೆ ಕಳುಹಿದ ಮಾತಿನಂತೆ, ಅವಳು ಅವರಿಗೆ ಕಳುಹಿಸಿದ ಪತ್ರದಲ್ಲಿ ಬರೆದ ಹಾಗೆಯೇ ಮಾಡಿದರು."

ನಾಬೋತನು ಆ ಮುಂಜಾನೆ ಎದ್ದಾಗ ಏನು ಸಂಭವಿಸಿತು ಎಂಬುದನ್ನು ಅಲ್ಲಿದ್ದ ದೃಷ್ಯವನ್ನು ನೀವು ಊಹಿಸಿಕೊಳ್ಳಿರಿ. ಬಹುಶಃ ಆತನು ಮುಂಜಾನೆಯ ತಿಂಡಿಯನ್ನು ತನ್ನ ಹೆಂಡತಿ ಮಕ್ಕಳೊಂದಿಗೆ ಆನಂದಿಸಿದನು. ಆಗ ಅಲ್ಲಿ ಪಟ್ಟಣದಲ್ಲಿ ವಿಶೇಷ ಉಪವಾಸವು ಇದೆ ಎಂದೂ, ಮತ್ತು ಪ್ರತಿಯೊಬ್ಬರೂ ಬರಬೇಕೆಂಬ ವಾಕ್ಯವು ಬಂದಿತು.

ನಂತರ ನಾಬೋತನು ನೇಮಿಸಿದ ಸ್ಥಳಕ್ಕೆ ತಲುಪಿಸಿದನು, ಅಲ್ಲಿ ಆತನಿಗೆ ಆಶ್ಚರ್ಯವು ಕಾದಿತ್ತು. ಅಪರಾದಿಯ ಸ್ಥಾನವು ಆತನಿಗೆ ಕೊಡಲ್ಪಟ್ಟಿತ್ತು. ಕಾರ್ಯಕಲಾಪಗಳು ಪ್ರಾರಂಭ ವಾ ದವು. "ಯಾಕೆ ದೇವರ ಕೋಪವು ನಮ್ಮ ಮೇಲಿದೆ? ಪಾಪವು ಎಲ್ಲಿದೆ?" ಎಂದು ಜನರು ಕೇಳಿದರು. ನಾಬೋತನಿಗೆ ಆಶ್ಚರ್ಯವಾಯಿತು, ಸಮಾಜದಲ್ಲಿ ಅತಿ ಕೀಳು ಹೆಸರಿರುವಂತಹ ಇಬ್ಬರು ಮನುಷ್ಯರು ಎದ್ದುನಿಂತರು. ಅವರು ನಾಬೋತನ ಮುಂದೆ ನಡಯುತ್ತಾ ಬಂದು ಆತನ ಮುಂದೆ ನಿಂತು ತಮ್ಮ ಐದು ಬೆರಳುಗಳಿಂದ ಆತನನ್ನು ಸೂಚಿಸಿದರು. "ನಾಬೋ ತನು ದೇವರನ್ನು ದೂಷಿಸಿದ್ದಾನೆ, ನಾಬೋತನು ಅರಸನನ್ನು ದೂಷಿಸಿದ್ದಾನೆ" ಎಂದರು. ನಾಬೋತನು "ಇದೊಂದು ಹಾಸ್ಯವಾಗಿರಬಹುದು ಖಚಿತವಾಗಿ ಯಾರೋಬ್ಬರೂ ಇದನ್ನು ನಂಬುವುದಿಲ್ಲ" ಎಂದು ಕೊಂಡನು. ಸುತ್ತಲೂ ನೋಡಿದನು, ಆದರೆ ಆತನು ಅಲ್ಲಿ ಹಿರಿಯರ ಮತ್ತು ನಾಯಕರ ಕಠಿಣವಾದ ಮುಖಗಳನ್ನು ಮಾತ್ರ ಆತನು ಕಂಡನು. ಆತನ ಸ್ನೇಹಿತರು ನೆರೆಯವರು ಮುಖ ತಿರುಗಿಕೊಂಡ ದೂರಹೋದರು.

ನಾಬೋತನು ಪಟ್ಟಣದಿಂದ ಹೊರಕ್ಕೆ ಎಳೆದು ತರಲ್ಪಟ್ಟನು. "ಖಚಿತವಾಗಿಯೂ ಈ ದುಸ್ವಪ್ನ ಬೇಗನೆ ಕೊನೆಗೊಳ್ಳುತ್ತದೆ" ಎಂದು ಆತನು ಯೋಚಿಸಿದ. ಆದರೆ ಅವರು ಕಲ್ಲೆಸೆದು ಕೊಲ್ಲುವ ಸ್ಥಳಕ್ಕೆ ಬಂದರು. ನಾಬೋತನಿಗೆ ಮೊಣಕಾಲೂರಲು ಒತ್ತಾಯಿಸಲಾಯಿತು. ಇಬ್ಬರು ಸಾಕ್ಷಿಗಳು ತಮ್ಮ ಕೈಯಲ್ಲಿ ದೊಡ್ಡ ಕಲ್ಲನ್ನು ಹಿಡಿದುಕೊಂಡು ಮುಂದೆ ಬಂದರು; ಅವರು ಅವುಗಳನ್ನು ನಾಬೋತನ ಹತ್ತಿರ ಬಿಸಿ ಒಗೆದರು. ನೋವು ಶುರುವಾಯಿತು. ಕಲ್ಲುಗಳು ಮಳೆಯಂತೆ ಆತನ ದೇಹದ ಮೇಲೆ ತಲೆಯ ಮೇಲೆ ಬಿದ್ದವು. ಆತನ ದೇಹವು ಮುರಿಯಿತು, ಆತನ ತಲೆಯು ಚೂರಾಯಿತು, ಆತನು ಪ್ರಜ್ಞೆಯನ್ನು ಕಳೆದುಕೊಂಡನು. ಆತನು ಅಂತಿಮ ವಾದ ಮೇಲು ಸುರನ್ನು ತೆಗೆದುಕೊಂಡನು ಮತ್ತು ಸತ್ತು, ಈ ಹತಸಾಕ್ಷಿಯು ಕರ್ತನಿಗಾಗಿ ತನ್ನನ್ನು ಒಪ್ಪಿಸಿಕೊಂಡನು.

ಭಯಾನಕತೆಯು ಮುಗಿದುಹೋಗಲಿಲ್ಲ. ಇತರರೂ ನಾಬೋತನ ದ್ರಾಕ್ಷೇತೋಟವನ್ನು ಸ್ವಾಧೀನ ಪಡಿಸಿಕೊಳ್ಳಬಹುದಿತ್ತು. ಎಲ್ಲ ಸಡಿಲಾದ ಎಳೆಗಳು ಕಟ್ಟಲ್ಪಡಬೇಕಾಗಿದ್ದವು. ಹತ್ತು ಅಧ್ಯಾಯಗಳ ನಂತರ, 1 ಅರಸು 20ರಲ್ಲಿ ನಾವು ಕಾಣದಂತಹ ಭಯಂಕರವಾದ ಸಂಗತಿಯನ್ನು 2 ಅರಸು 9:26ರಲ್ಲಿ ಕಾಣುತ್ತೇವೆ. ಅವರು ನಾಬೋತನ ಮಕ್ಕಳನ್ನೂ ಸಹ ತೆಗೆದು ಕೊಂಡು ಬಂದು ಕೊಂದರು!

"ನಂತರ ನಾಬೋತನು ಕಲ್ಲೆಸೆಯಲ್ಪಟ್ಟು ಸತ್ತ ವರ್ತಮಾನವನ್ನು ಹಿರಿಯರು ಈಜಬೇಲಳಿಗೆ ಮುಟ್ಟಿಸಿದರು" (ವಚನ 14). ಈಜಬೇಲಳು ಆಹಾಬನ ಹೆಸರಿನಲ್ಲಿ ಪತ್ರವನ್ನು ಬರೆದು ಮುದ್ರೆ ಹಾಕಿದ್ದಳು, ಆದರೆ ಆಕೆ ಎಲ್ಲರನ್ನು ಮೂರ್ಖರನ್ನಾಗಿಸಲಾ ರಳು. ಆ ಪಟ್ಟಣದ ಅಧಿಕಾರಿಗಳಿಗೆ ಆ ಪತ್ರವನ್ನು ಯಾರು ಕಳುಹಿಸಿದ್ದರು ಎಂಬುದು ತಿಳಿಯಿತು. ಯಾರು ಇಲ್ಲಿ ದಣಿಗಳಾಗಿದ್ದಾರೆ ಎಂದು ಅವರು ಅರಿತರು; ಅವರು ಯಾರನ್ನು ಲಕ್ಷೀಕರಿಸಬೇಕು ಎಂಬದು ಅವರಿಗೆ ತಿಳಿದಿತ್ತು.

ಈಜಬೇಲಳು ತನ್ನ ಸುಂದರವಾದ ತೋಟದಲ್ಲಿ ನಡೆದಾಡುತ್ತಿರುವುದನ್ನೂ ಅಥವಾ ತನ್ನ ಸಂಗೀತ ಕೋಣೆಯಲ್ಲಿ ತನ್ನೆಲ್ಲಾ ಆಡಂಬರದಿಂದ ಕುಳಿತು ಅರಸನ ಸಂಗೀತ ವನ್ನು ಕೇಳುತ್ತಿರುವುದನ್ನು ಚಿತ್ರಿಸಿರಿ. ಆಗ ಆ ವರ್ತಮಾನವು ಬಂತು "ನಾಬೋತನು ಕಲ್ಲೆಸೆಯಲ್ಪಟ್ಟು ಸತ್ತನು." ಈಜಬೇಲಳಿಗೆಆ ತಾಯಿ ತನ್ನ ಗಂಡನ ಮತ್ತು ಮಕ್ಕಳ ದೇಹಗಳು ಕೊಳೆತುಹೋಗುವುದರ ಕುರಿತು ಹೋರಾಡುತ್ತಿರುವುದರ ಬಗೆಗೆಮತ್ತು ಮಕ್ಕಳ ಯಾವ ಕರುಣೆಯ ವಿಚಾರವೂ ಇಲ್ಲ. ಅರೆಹೊಟ್ಟೆಯ ನಾಯಿಗಳು ದಂಡುಗಟ್ಟಿಕೊಂಡು ಓಡಿದವು ನಾಯಿಗಳು ಅವಳ ಪ್ರಿಯರಾದವರ ರಕ್ತವನ್ನು ನೆಕ್ಕುತ್ತವೆ.[11] ಆ ತಾಯಿಯು ಆ ಮುರಿದು ಹೋದ ದೇಹದ ಭಾಗಗಳನ್ನು ಜೋಡಿಸಿಕೊಂಡು, ಅವುಗಳನ್ನು ಕೇವಲ ನೀರಿ ನಿಂದಲ್ಲ ತನ್ನ ಕಣ್ಣೀರಿನಿಂದ ತೊಳೆದು ದೇಹಗಳನ್ನುಹೂಳಲೆಂದು ವ್ಯವಸ್ಥಿತವಾಗಿ ಜೋಡಿಸಿ

ಕೊಳ್ಳುತ್ತಲಿದ್ದಾಳೆ ಎಂಬ ವಿಚಾರವು ಆಕೆಗೆ ಬರಲಿಲ್ಲ. ಈಜಬೇಲಳು ಮುಗುಳ್ನಗೆ ಬೀರುತ್ತಾ ತನ್ನ ಮುನಿಸಿಕೊಂಡಿರುವ ಪತಿಯತ್ತ ಹೋದಳು ನಿಯಮಾನುಸಾರದ ದೇಶದ್ರೋಹಿಯ ಭೂಮಿಯು ರಾಜನಿಗೆ ಮರಳಿತು ಎಂದು ಹೇಳಿದಳು.

> ನಂತರ ನಾಬೋತನು ಕಲ್ಲೆಸೆಯಲ್ಪಟ್ಟು ಸತ್ತ ವರ್ತಮಾನವನ್ನು ಹಿರಿಯರು ಈಜೆಬೆಲಳಿಗೆ ಮುಟ್ಟಿಸಿದರು. ಆಕೆಯು ಇದನ್ನು ಕೇಳಿ ಆಹಾಬನಿಗೆ - ನೀನು ಹೋಗಿ ನಾಬೋತನು ಮಾರುವುದಿಲ್ಲವೆಂದು ಹೇಳಿದ ದ್ರಾಕ್ಷೇ ತೋಟವನ್ನು ಸ್ವಾಧೀನ ಮಾಡಿಕೋ; ಅವನು ಜೀವದಿಂದಿಲ್ಲ ಅವನು ಸತ್ತನು ಎಂದು ಹೇಳಿದಳು (ವಚನ 15).

ಈಜೆಬೆಲಳು "ನಾನು ಹೇಳಿದಂತೆ ನಾನು ಮಾಡಿದ್ದೇನೆ" ಎಂದು ಕೊಚ್ಚಿಕೊಂಡಳು!

ಇದು ಗಂಟುಮೋರೆ ಹಾಕಿಕೊಂಡಿರುವ ಬಲಿಷ್ಟನಾದ ಅರಸನಿಗೆ ನವತಾರುಣ್ಯವನ್ನು ತಂದಿತು! ಮತ್ತು "ಇಜ್ರೇಲಿನವನಾದ ನಾಬೋತನ ಮರಣವಾರ್ತೆಯನ್ನು ಆಹಾಬನು ಕೇಳಿ ದ್ರಾಕ್ಷೆತೋಟವನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕೋಸ್ಕರ ಇಳಿದು ಹೋದನು" (ವಚನ 16). ಆಹಾಬನು ಹಾಸಿಗೆಯಿಂದ ಎದ್ದನು, ತನ್ನ ಬಟ್ಟೆಗಳನ್ನು ಹಾಕಿಕೊಂಡನು, ಬಹುಶಃ ತರಾತುರಿಯಿಂದ ಊಟಮಾಡಿದನು, ಮತ್ತು ದ್ರಾಕ್ಷೇತೋಟಕ್ಕೆ ಇಳಿದು ಹೋದನು, ಬಹುಶಃ ಆತನ ತುಟಿಯ ಮೇಲೆ ಹಾಡೊಂದು ಗನುಗುತ್ತಿರಬಹುದು.

## ದೇವರ ತಾಳ್ಮೆಯು ಮುಗಿದು ಹೋಯಿತು

## (21:17-24, 27-29; 22:38; 2 ಅರಸು 9:21-36)

ಅದೇ ಆಗಿತ್ತು. ದೇವರ ತಾಳ್ಮೆಯು ಮುಗಿದು ಹೋಯಿತು. ದೇವರು ಹೇಳಿದನು, "ಇನ್ನು ಸಾಕು!" ನಾವು ವಚನ 17ರಲ್ಲಿ ಹೀಗೆ ಓದುತ್ತೇವೆ. "ಆಗ ತಿಷ್ಬೀಯನಾದ ಎಲೀಯನಿಗೆ ಯೆಹೋವನ ವಾಕ್ಯವುಂಟಾಯಿತು." (ವಚನ 17). ಇಲ್ಲಿ "ಯೆಹೋವನ ವಾಕ್ಯವನ್ನು" ನಾವು ತಿರುಗಿ ನೋಡುತ್ತೇವೆ. ಎಲೀಯನು ತನ್ನ ಕಾರ್ಯಕ್ಕಾಗಿ ಹಿಂತಿರುಗಿಸಲ್ಪಟ್ಟನು! ದೇವರು ಎಲೀಯನಿಗೆ ಆಜ್ಞಾಪಿಸಿದನು,

> "ಅವನಿಗೆ - ನೀನು ಹೋಗಿ ಸಮಾರ್ಯದಲ್ಲಿ ವಾಸಿಸುವ ಇಸ್ರಾಯೇಲ್ ರಾಜನನ್ನು ಕಾಣು; ಅವನು ಈಗ ನಾಬೋತನ ದ್ರಾಕ್ಷೇತೋಟವನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕೋಸ್ಕರ ಅಲ್ಲಿಗೆ ಹೋಗಿದ್ದಾನೆ." ಅವನಿಗೆ - "ನೀನು ಕೊಲೆಮಾಡಿ (ಅಕ್ಷರಸಹ ಹತ್ಯಮಾಡಿ) ಸ್ವಾಸ್ಥ್ಯವನ್ನು ಸಂಪಾದಿಸಿಕೊಂಡಿಯಲ್ಲವೋ?" "ನಾಯಿಗಳು ನಾಬೋತನ ರಕ್ತವನ್ನು ನೆಕ್ಕಿದ ಸ್ಥಳದಲ್ಲೇ ನಿನ್ನ ರಕ್ತವನ್ನೂ ನೆಕ್ಕುವವು ಎಂಬುದಾಗಿ ಯೆಹೋವನು ಅನ್ನುತ್ತಾನೆ ಎಂದು ಅವನಿಗೆ ಹೇಳು ಎಂಬುದೇ" (ವಚನಗಳು 18, 19).

ಅತ್ತ ದ್ರಾಕ್ಷೆ ತೋಟದಲ್ಲಿ, ಆಹಾಬನು ತನ್ನ ಹೊಸ ಆಸ್ತಿಯಲ್ಲಿ ತನ್ನ ಜೊತೆ ಬಂದವರೊಡನೆ ತಿರುಗಾಡುತ್ತಿದ್ದಾನೆ. ಆತನು ಬಹುಶಃ ತನ್ನ ತೋಟಕ್ಕಾಗಿ ಯೋಜನೆ ಯೋಜಿಸುತ್ತಿರಬಹುದು: "ನಾನು ಇಲ್ಲಿ ಟೊಮೋಟೋ ಹಾಕುತ್ತೇನೆ ... ಇಲ್ಲಿ ಮೆಕ್ಕೆಜೋಳವನ್ನು ... ಇಲ್ಲಿ ಈರುಳ್ಳಿಯನ್ನು ... ಅಲ್ಲಿ ... ಮತ್ತು ಬ್ರೊಕಲಿ ... ಬ್ರೊಕಲಿಯನ್ನು ಮರೆತೇಬಿಟ್ಟಿದ್ದೆ" ಒಂದು ವೇಳೆ ಆಹಾಬನ ದೊಡ್ಡ ಹೆಜ್ಜೆಗುರುತು, ಚಿಕ್ಕ ಹೆಜ್ಜೆಗುರುತು ಆತನ ಹೆಂಡತಿಯದು, ಅದಕ್ಕಿಂತಲೂ ಚಿಕ್ಕ ಹೆಜ್ಜೆ ಗುರುತುಗಳು ಆತನ ಮಕ್ಕಳವು. ಆದರೆ ಆಹಾಬನು ಆದರಿಂದ ಕುರುಡನಾಗಿದ್ದನು. ನಂತರ ಆತನು ಹೆಜ್ಜೆಯ ಸದ್ದನ್ನು ಕೇಳಿದನು. ಹಿಂತಿರುಗಿ, ಆತನು ನೋಡಿದಾಗ ಆತನು ನೋಡುತ್ತಾನೆ. ಆತನ ಮನಸ್ಸಾಕ್ಷಿಯು ಆತನೆದುರು ರೂಪತಾಳಿ ನಿಂತಿದೆ - ಆತನ ಹಳೆಯ ದುಷ್ಕರ್ಮದ ಫಲ - ಇನ್ನೂ ಅದೇ ಒರಟಾದ ಬಟ್ಟೆಯಲ್ಲಿದ್ದಾನೆ, ಆತನ ಕಣ್ಣುಗಳ ಗೂಡಿನ ಆಳದಲ್ಲಿನ ಬೆಂಕಿಯಿಂದ ಹೊಳೆಯುತ್ತಿವೆ. ಆಹಾಬನು ಅವನನ್ನು

ಕೇಳಿದನು "ನನ್ನ ವೈರಿಯೇ, ನನ್ನನ್ನು ಕಂಡುಕೊಂಡಿಯಾ" (ವಚನ 20ಎ). ಕೆಲ ಲೇಖಕರು ಯೋಚಿಸುವುದೇನೆಂದರೆ ಆಹಾಬನ ಅರ್ಥವು ನನ್ನನ್ನು ನೀನು ಹೊರಗೆ ಕಂಡುಕೊಂಡಿಯಾ? ಎಂದು. ಎಲೀಯನು ಉತ್ತರಿಸಿದನು. "ಹೌದು ಕಂಡುಕೊಂಡೆನು (ನಾನು ನಿನ್ನ ವೈರಿಯಾಗಿರುವ ಕಾರಣದಿಂದಲ್ಲ ಆದರೆ ನೀನು ನಿನ್ನ ಪಾಪದಿಂದಲೆ), ನೀನು ನಿನ್ನನ್ನು ಪಾಪಕ್ಕೆ ಮಾರಿಬಿಟ್ಟು; ಯೆಹೋವನ ದೃಷ್ಟಿಯಲ್ಲಿ ದ್ರೋಹಿಯಾದೆಯಲ್ಲಾ" (ವಚನ 20ಬಿ).

ಒಬ್ಬ ಮನುಷ್ಯನು ಮಾರ್ಪಡಿಸದಂತ ಕೆಟ್ಟತನಕ್ಕೆ ಮಾರಿಕೊಂಡಾಗ ಆತನು ಏನೂ ಇಲ್ಲದಕ್ಕೆ ತನ್ನನ್ನು ಮಾರಿಕೊಂಡಂತೆ ಕಂಡುಬರುತ್ತದೆ. ಆಕಾನನು ತನ್ನನ್ನು ತಾನು ಬೆಲೆಬಾಳುವ ಕಂಬಳಿಗೆ ಮತ್ತು ಬಂಗಾರದ ವಸ್ತುಗಳಿಗಾಗಿ ಮಾರಿಕೊಂಡನು, ಮತ್ತು ಏನೂ ಇಲ್ಲದ್ದರಿಂದ ಆತನು ಕೊನೆಗೊಂಡನು. ಯೂದನು ತನ್ನನ್ನು ತಾನು ಮೂವತ್ತು ಬೆಳ್ಳಿ ನಾಣ್ಯಗಳಿಗಾಗಿ ಮಾರಿಕೊಂಡನು ಮತ್ತು ಅವುಗಳಿಂದ ಯಾವುದೇ ವಿಧವಾದ ಪ್ರಯೋಜನವು ಆಗಲಿಲ್ಲ. ಆಹಾಬನು ತನ್ನನ್ನು ತಾನು ನೆಲದ ತುಂಡಿಗಾಗಿ ಮಾರಿಕೊಂಡನು, ಆದರೆ ಆತನ ದಿನಗಳು ಎಣಿಕೆಗೆ ಒಳಗಾದವು.

ಕೆಲವರು ಹೀಗೆ ವಿರೋಧಿಸಬಹುದು "ಒಂದು ನಿಮಿಷ ತಡೆಯಿರಿ. ಆಹಾಬನು ನಾಬೋತನ ಕೊಲೆಯನ್ನು ಮಾಡಲಿಲ್ಲ; ಆತನು ಆ ಕರಾರುಪತ್ರವನ್ನೂ ಸಹ ಕಳುಹಿಸಿರಲಿಲ್ಲ" ಎಂದು. ಅದೂ ನಿಜ. ಆದರೆ ಕೆಲವುಗಳಲ್ಲಿ ಆಹಾಬನು ಬಹುಶಃ ಏನು ಸಂಭವಿಸುತ್ತದೆ ಎಂಬುದರ ಬಗ್ಗೆ ಎಚ್ಚರದಿಂದಿದ್ದನು. ಹಾಗಿಲ್ಲದೇ ಹೋಗಿ ದ್ದಾದರೆ, ಆತನು ಎಚ್ಚರದಿಂದಿರಲೇಬೇಕು. ಒಂದಂತೂ ಖಚಿತ: ಆತನು ಅಧಾರ್ಮಿಕ ವ್ಯವಹಾರಗಳ ಫಲವನ್ನು ಹೊಂದುವವನಿದ್ದನು. ಬೈಬಲ್‌ನ ಉದ್ದಕ್ಕೂ ಸೂಚಿಸಿದ್ದೇನೆಂದರೆ ಗಂಡನಾದವನು ಆತನ ಮನೆಯವರು ಮಾಡಿದ ನಿರ್ಧಾರಗಳಿಗೆ ಆತನೇ ಜವಾಬ್ದಾರನು. ಗಂಡಂದಿರಿಗೆ ಮತ್ತು ತಂದೆಗಳಿಗೆ ಇದೊಂದು ಭಯವನ್ನು ಹುಟ್ಟಿಸುವಂತಹ ಜವಾಬ್ದಾರಿಯಾಗಿದೆ. ಈ ಕಾರ್ಯವನ್ನು ಗಂಭೀರವಾಗಿ ಪರಿಗಣಿಸಿರಿ!

ಎಲೀಯನ ಧ್ವನಿಯು ಅಂತಿಮ ನಿರ್ಣಯದಂತೆ ಮುಂದುವರೆಯಿತು:

> ನಾನು ನಿನ್ನ ಮೇಲೆ ಕೇಡನ್ನು ಬರಮಾಡಿ ನಿನ್ನನ್ನು ಕಸವನ್ನೋ ಎಂಬಂತೆ ತೆಗೆದುಹಾಕುವೆನು; ನಿನ್ನ ಸಂತಾನದ ಗಂಡಸರಲ್ಲಿ ಸ್ವತಂತ್ರರಾಗಲಿ ಪರ ತಂತ್ರರಾಗಲಿ ಎಲ್ಲರನ್ನೂ ಇಸ್ರಾಯೇಲ್ಯರೊಳಗಿಂದ ಕಡಿದುಬಿಡುವೆನು. ನೀನು ಇಸ್ರಾಯೇಲರನ್ನು ಪಾಪಕ್ಕೆ ಪ್ರೇರಿಸಿ ನನಗೆ ಕೋಪವನ್ನೆಬ್ಬಿಸಿದ್ದರಿಂದ ನೆಬಾಟನ ಮಗನಾದ ಯಾರೊಬ್ಬಾಮನ ಮನೆಗೂ ಅಹೀಯನ ಮಗನಾದ ಬಾಷನ ಮನೆಗೂ ಆದ ಗತಿನಿನ್ನ ಮನೆಗೂ ಆಗುವದು ಅನ್ನುತ್ತಾನೆ (ವಚನಗಳು 21, 22).

ಇಲ್ಲಿ ಎಲೀಯನು ಪಾಪದ ಕಾರಣದಿಂದ ಬೇರು ಸಹಿತ ಕಿತ್ತುಹಾಕಲ್ಪಟ್ಟ ಯಾರೊಬ್ಬಾಮನ ಮನೆ ಮತ್ತು ಬಾಷನ ಮನೆ ಎಂದು ಎರಡು ಮನೆಗಳನ್ನು ಸೂಚಿಸುತ್ತಾನೆ. ಎಲೀಯನು ಮುಂದುವೆರೆಯುತ್ತಾ,

> "ಆತನು ಈಜೆಬೆಲಳನ್ನು ಕುರಿತು - ನಾಯಿಗಳು ಇಜ್ರೇಲ್ ಪಟ್ಟಣದ ಗೋಡೆಯ ಬಳಿಯಲ್ಲಿ ಆಕೆಯ ಶವವನ್ನು ತಿನ್ನುವವು; ಆಹಾಬನ ಮನೆಯವರಲ್ಲಿ ಊರೊಳಗೆ ಸಾಯುವಂಥವರನ್ನು ನಾಯಿಗಳೂ ಅಡವಿಯಲ್ಲಿ ಸಾಯುವಂಥವರನ್ನು ಪಕ್ಷಿಗಳೂ ತಿಂದುಬಿಡುವವು ಎಂದು ಹೇಳುತ್ತಾನೆ ಅಂದನು (ವಚನಗಳು 23, 24).

ಇದು ಊಹಿಸಿಕೊಳ್ಳಲು ಕಷ್ಟಕರವಾದಂತಹ ಅಂತಿಮ ನಿರ್ಣಯವು ಭಯಹುಟ್ಟಿಸುವ ಮುಂತಿಳಿಸುವಿಕೆಯಾಗಿತ್ತು!

ನಾವು ಗಮನಿಸಬೇಕಾದ ಇನ್ನೊಂದು ವಿವರಣೆಯು ಅಲ್ಲಿದೆ: 2 ಅರಸು 9:25ರ

ಪ್ರಕಾರ, ಎಲೀಯನು ಆಹಾಬನನ್ನು ಎದುರಿಸಿದಾಗ ಇಬ್ಬರಾದರೂ ಜನರು ಅಲ್ಲಿ ಉಪಸ್ಥಿತರಿದ್ದರು. ಒಬ್ಬನು ಯೇಹುವು, ಆಹಾಬನ ಸೇನಾಪತಿಗಳಲ್ಲಿ ಒಬ್ಬನಾದವನೂ ಮತ್ತು ಆಹಾಬನ ಸ್ಥಳವನ್ನು ತೆಗೆದುಕೊಳ್ಳಲು ದೇವರಿಂದ ಹೇಳಲ್ಪಟ್ಟವನೂ ಆದವನು (1 ಅರಸು 19:16 ಹೋಲಿಸಿ). ಈ ದೃಷ್ಯವು ಮತ್ತು ಸಂದೇಶವು ಯೇಹುವಿನ ಮನದಲ್ಲಿ ಅಳಿಸಲಾರದಂತೆ ಮುದ್ರೆಯೊತ್ತಿತ್ತು.

ನಾವು 27ನೇಯ ವಚನಕ್ಕೆ ಬಂದಾಗ ನಾವು ಆಶ್ಚರ್ಯಕರವಾದ ಅನಿರೀಕ್ಷಿತವಾದ ಕೆಲವನ್ನು ಕಂಡುಕೊಳ್ಳುತ್ತೇವೆ. ಆಹಾಬನು ಭಯಗ್ರಸ್ತನಾದನು, "ಆಹಾಬನು ಎಲೀಯನ ಮಾತುಗಳನ್ನು ಕೇಳಿ ತನ್ನ ಬಟ್ಟೆಗಳನ್ನು ಹರಿದುಕೊಂಡು ಹಗಲಿರುಳು ಮೈಮೇಲೆ ಗೋಣಿತಾಟು ಹಾಕಿಕೊಂಡು ಉಪವಾಸಮಾಡುತ್ತಾ ದೀನಮನಸ್ಸಿನಿಂದ ಪ್ರವರ್ತಿಸಿದನು." ದೇವರು ತಿರುಗಿ ತನ್ನನ್ನು ತಾನು ಕೃಪಾಪೂರಿತ ದೇವರು ಎಂದು ತೋರಿಸಿಕೊಂಡನು. ಆಹಾಬನು ತನ್ನ ದುಃಖವನ್ನು ತೋರಿಸಿ ಆತನನ್ನು ಗೆದ್ದು ಮರಣದಂಡನೆಯನ್ನು ಅನೇಕ ವರ್ಷಗಳವರೆಗೆ ಮುಂದೂಡಿಕೊಂಡನು.

> ಆದದರಿಂದ ಯೆಹೋವನು ತಿಷ್ಬೀಯನಾದ ಎಲೀಯನಿಗೆ - ಆಹಾಬನು ನನ್ನ ಮುಂದೆ ತಗ್ಗಿಹೋದದ್ದನ್ನು ಕಂಡಿಯಾ? ಅವನು ನನ್ನ ಮುಂದೆ ತಗ್ಗಿಸಿಕೊಂಡದರಿಂದ ನಾನು ಮುಂತಿಳಿಸಿದ ಕೇಡನ್ನು ಅವನ ಜೀವಮಾನದಲ್ಲಿ ಬರಗೊಡದೆ ಅವನ ಮಗನ ಕಾಲದಲ್ಲಿ ಅವನ ಮನೆಯವರ ಮೇಲೆ ಬರಮಾಡುವೆನು ಎಂದು ಹೇಳಿದನು (ವಚನಗಳು 28, 29).

ಈ ವಚನಗಳಲ್ಲಿ ನಾವು ಬಲಯುತವಾದ ಸಂದೇಶವನ್ನು ಕಾಣುತ್ತೇವೆ. ಮೊದಲು ಯಾರಾದರೂ ಆಹಾಬನಂತೆ ಕಠಿಣರಾದರೂ ಕೂಡಾ ಮುಟ್ಟಲ್ಪಡುತ್ತಾರೆ. ಎರಡನೆಯದಾಗಿ ದೇವರು ತನ್ನ ವಾಗ್ದಾನಗಳನ್ನು ಆಹಾಬನಂತವರಿಗೂ ಕೂಡಾ ಗೌರವಿಸುತ್ತಾನೆ. ಕ್ಲೈಡ ಮಿಲ್ಲರ್ ಹೀಗೆ ಅವಲೋಕಿಸಿದ್ದಾರೆ:

> ದೇವರು ಒಂದು ವೇಳೆ ಬಲು ದುಷ್ಟರಾದ ಇಸ್ರಾಯೇಲ್ ಮತ್ತು ಯುದಾಯದ ರಾಜರು ಆತನೆಡೆಗೆ ತಿರುಗಿಕೊಂಡಾಗ ಅವರಿಗೆ ಕರುಣೆಯನ್ನು ತೋರಿದ್ದಾದರೆ ಆತನು "ಪಾಪಿಗಳಲ್ಲಿ ಮುಖ್ಯಸ್ಥನನ್ನು" ಕೂಡಾ ಆತನು ರಕ್ಷಿಸಬಹುದು (1 ತಿಮೊಥೆ 1:15) ಆತನ ಅಧಿಕಾರ ಮತ್ತು ಆತನ ಚಿತ್ತವು ಆತನೆಡೆಗೆ ತಾಳ್ಮೆ ಯಿಂದಲೂ ಮತ್ತು ವಿಧೇಯತೆಯಿಂದಲೂ (ಇಬ್ರಿಯ 5:7-9) ಬರುವವರನ್ನು ರಕ್ಷಿಸುವಲ್ಲಿ ಯಾವ ಮಿತಿಯೂ ಇಲ್ಲ.[13]

ಅಧ್ಯಾಯವು ಇಲ್ಲಿ ಕೊನೆಗೊಳ್ಳುತ್ತದೆ, ಆದರೆ ಕಥೆಯು ಮುಗಿಯುವುದಿಲ್ಲ. ಆಹಾಬನ ಪಶ್ಚಾತ್ತಾಪವನ್ನು ಪಶ್ಚಾತ್ತಾಪ ಎಂದು ಕರೆಯುವುದಾದರೆ, ಅದು ಅಲ್ಪಕಾಲದ್ದು ಆಹಾಬನಿಗೆ ಏನೂ ಸಂಭವಿಸಲಿಲ್ಲ. ಮೂರು ವರ್ಷಗಳು ಸಂದವು (1 ಅರಸು 22:1), ಮತ್ತು ಏನೂ ಸಂಭವಿಸಲಿಲ್ಲ. ಯಾವ ವಿಪತ್ತು ಆಹಾಬನ ಮೇಲೆ ಬೀಳಲಿಲ್ಲ. ಯಾವ ಮಿಂಚೂ ಆಕಾಶದಿಂದ ಮಿಂಚಲಿಲ್ಲ; ಭೂಮಿಯು ತೆರೆಯಲಿಲ್ಲ ಆತನನ್ನು ನುಂಗಲಿಲ್ಲ. ಆಹಾಬನು ತನ್ನ ಹಳೆಯ ಮಾರ್ಗದಲ್ಲಿಯೇ ನಡೆದನು.[14] ನಾನು ಊಹಿಸುತ್ತೇನೆ, ಈಜೆಬೆಲಳು ಊಟದ ಮೇಜಿನ ಹತ್ತಿರ ಇದ್ದಾಳೆ, ತಾಜಾ ತರಕಾರಿಗಳ ಬೌಲನ್ನು ಆಹಾಬನ ಹತ್ತಿರ ಸರಿಸುತ್ತಾ ಹೀಗೆ ಹೇಳುತ್ತಿದ್ದಾಳೆ. "ಆಹಾಬ, ಇನ್ನೂ ಸ್ವಲ್ಪ ಬಟಾಣಿಯನ್ನೂ ಮತ್ತು ಗಜ್ಜರಿಯನ್ನೂ ತೆಗೆದುಕೋ, ಇವುಗಳು ನಮ್ಮ ತೋಟದಿಂದ ತರಲ್ಪಟ್ಟವುಗಳು" ಹೀಗೆ ಆಕೆಯು ನಕ್ಕು ಹೇಳಿರಬಹುದು. "ಆ ವಯಸ್ಸಾದ ಮುದಿ ಎಲೀಯನು ನಾಬೋತನ ರಕ್ತವನ್ನು ನೆಕ್ಕಿದ ಜಾಗಗದಲ್ಲಿಯೇ ನಾಯಿಗಳು ನಿನ್ನ ರಕ್ತವನ್ನು ನೆಕ್ಕುವವು ಎಂದು ಹೇಳಿದನಲ್ಲವೇ, ಆದರೆ ನೀನು ಇವತ್ತು ಚೆನ್ನಾಗಿ

ಕಾಣುವಂತೆ ನಾನು ಹಿಂದೆಂದೂ ಕಂಡಿಲ್ಲ!" ನಾನು ಹೀಗೆ ಊಹಿಸುತ್ತೇನೆ, ಹೇಗೋ, ಆಹಾಬನು ನಾಯಿಯ ಬೊಗಳುವಿಕೆಗೆ ಪ್ರತಿಸಮಯ ನಡುಗುತ್ತಿದ್ದನು.

ಅದರೊಡನೆ, ನಾವು 22ನೇಯ ಅಧ್ಯಾಯಕ್ಕೆ ಬರುತ್ತೇವೆ. ಸಿರಿಯಾದ ಮೇಲೆ ಯುದ್ಧವಿಲ್ಲದೆ ಮೂರುವರ್ಷಗಳು ದಾಟಿಹೋದವು; ಈಗ ಯುದ್ಧವು ಪ್ರಾರಂಭವಾಯಿತು. ಬೆನ್ಹದದನು ತಾನು ಏನು ಮಾಡಬಹುದು ಎಂದು ಹೇಳಿದುದನ್ನು ಮಾಡಲಿಲ್ಲ; ರಾಮೋತ್ ಗಿಲ್ಯಾದ್ ಇನ್ನೂ ಸಿರಿಯನ್ನರ ಕೈಯಲ್ಲಿ ಇತ್ತು. ಆಹಾಬನು ಯೂದಾಯದ ಅರಸನಿಂದ ಸೈನ್ಯದ ಸಹಾಯವನ್ನು ಪಡೆದನು ಮತ್ತು ಯುದ್ಧಕ್ಕಾಗಿ ಸಿದ್ಧನಾದನು. ದೇವರ ಪ್ರವಾದಿಯು ಆತನಿಗೆ ಹೋಗದಿರುವಂತೆ ಎಚ್ಚರಿಸಿದನು. ಆಹಾಬನು ಪ್ರವಾದಿಯ ಮಾತನ್ನು ಕೇಳಲು ನಿರಾಕರಿಸಿದನು; ಆದರೂ ಆತನು ಬಹುವಾಗಿ ನಿಸ್ತೇಜನಾದನು. ಆತನು ತನ್ನನ್ನು ತಾನು ವೇಶ ಬದಲಿಸಿಕೊಂಡು ಸಾಮಾನ್ಯ ಸೈನಿಕನಂತೆ ಯುದ್ಧಕ್ಕೆ ಹೋದನು. ಆತನು ಆಹಾಬನನ್ನು ಹುಡುಕುವುದಕ್ಕೋಸ್ಕರ ಸುಮಾರು ಮೂವತ್ತೆರಡು ರಥಗಳನ್ನು ಕಳುಹಿಸಿದನು, ಆದರೆ ಅವರು ಆತನನ್ನು ಕಾಣಲಿಲ್ಲ. ಆಗ ಯಾವುದೆ ಹೆಸರಿಲ್ಲದ, ಯಾವುದೆ ಗುರಿಯಿಲ್ಲದ ಬಿಲ್ಲುಗಾರನು ಗಾಳಿಯಲ್ಲಿ ಒಂದು ಬಾಣವನ್ನು ಬಿಟ್ಟನು; ಮತ್ತು ಆ ಬಾಣವು ಆಹಾಬನ ಯುದ್ಧಕವಚದ ಸಂದಿಯಲ್ಲಿ ಬಿರುಕನ್ನು ಮೂಡಿಸಿತು. ಒಮ್ಮಲೇ ಒಂದು ರಕ್ತನಾಶವು ತೀವ್ರವಾಗಿ ಗಾಯಗೊಂಡಿತು. ಆಹಾಬನಿಗೆ ರಥದಲ್ಲಿ ಆಸರೆಯನ್ನು ಕೊಡಲಾಯಿತು, ಬಹುಶಃ ಆತನು ಗಾಯಗೊಂಡವನಂತೆ ಕಾಣುತ್ತಿರಲಿಲ್ಲ; ಆದರೆ ಆತನ ಹೃದಯದ ಪ್ರತಿಯೊಂದು ಬಡಿತದ ಜೊತೆ, ಆತನ ದೇಹದಲ್ಲಿನ ರಕ್ತವು ರಥದ ಮೆಟ್ಟಿಲಿನ ಮೇಲೆ ಆತನು ಸಾಯುವತನಕ ಹರಿಯತೊಡಗಿತು. ನಾವು ವಚನ 38ರಲ್ಲಿ ಹೀಗೆ ಓದುತ್ತೇವೆ. "ಅವರು ಸಮಾರ್ಯದ ಕೆರೆಯಲ್ಲಿ ಅವನ ರಥವನ್ನು ತೊಳೆಯುತ್ತಿದ್ದಾಗ ನಾಯಿಗಳು ಬಂದು ಅದರಲ್ಲಿದ್ದ ರಕ್ತವನ್ನು ನೆಕ್ಕಿದವು; ಹೀಗೆ ಯೆಹೋವನು ದೇವರು ಹೇಳಿದ ಮಾತು ನೆರವೇರಿತು." ದೇವರ ವಾಗ್ದಾನವು ಖಚಿತವಾದುದ್ದು.

ಆದರೂ ಇನ್ನೂ ಕಥೆಯು ಮುಗಿಯಲಿಲ್ಲ. ಇಪ್ಪತ್ತು ವರ್ಷಗಳು ಸಂದವು. ದೇವರ ಮಾರ್ಗಗಳ ನಮ್ಮ ಮಾರ್ಗಗಳಲ್ಲ ದೇವರ ವೇಳಪಟ್ಟಿಯು ನಮ್ಮ ವೇಳಾಪಟ್ಟಿಯಲ್ಲ ಎಂಬುದನ್ನು ನೆನಪುಮಾಡಿಕೊಳ್ಳಿರಿ. ಈ ಇಪ್ಪತ್ತು ವರ್ಷಗಳ ಆರಂಭದಲ್ಲಿ ಈ ಅವಧಿಯಲ್ಲಿ ಜರಗಿದವು. ಎಲೀಯನು ಸುಳಿಗಾಳಿಯ ಮೂಲಕ ಪರಲೋಕಕ್ಕೆ ಹೋದನು. ಎಲೀಷನು ತನ್ನ ಶ್ರೇಷ್ಟವಾದ ಕಾರ್ಯವನ್ನು ಆರಂಭಿಸಿದನು. ಆಹಾಬನ ಮಗನಾದ ಯೆಹೋರಾಮನು (ಅಥವಾ ಯೋರಾಮ) ಸಿಂಹಾಸನಕ್ಕೆ ಬಂದನು. ಈಜೆಬೆಲಳು ಅಧಾರ್ಮಿಕವಾದ ತಾಯಿಯಾಗಿದ್ದಳು ಕೊನೆಯಲ್ಲಿ ಕಥೆಯ ಸಮಾಪ್ತಿಯ ಸಮಯವು ಬಂದಿತು (2 ಅರಸು 9).

ಯೆಹೋರಾಮನು ರಾಮೋತ್ ಗಿಲ್ಯಾದಿನ ಯುದ್ಧದಲ್ಲಿ ಗಾಯಗೊಂಡನು. ಆತನು ಯೇಹುವನ್ನು ಸೈನ್ಯವನ್ನು ನೋಡಿಕೊಳ್ಳುವುದಕ್ಕೆ ನೇಮಿಸಿ ಇಜ್ರೆಲಿಗೆ ತಿರುಗಿ ಹೋದನು. ಎಲೀಷನು ಯೇಹುವನ್ನು ಅರಸನನ್ನಾಗಿ ಅಭಿಷೇಕಿಸಲು ಪ್ರವಾದಿಯೊಬ್ಬನನ್ನು ಕಳುಹಿಸಿದನು.

ಯೇಹುವು ಇಜ್ರೆಲನೆಡೆಗೆ ನಡೆದನು, ಸೈನ್ಯವು ಆತನ ಹಿಂದೆ ಹೋಯಿತು. ಆತನು ಆರು ಅಥವಾ ಏಳು ಮೈಲು ದೂರವಿರುವಾಗ ಗೋಡೆಯ ಮೇಲಿರುವ ಕಾವಲುಗಾರನು ಆತನನ್ನು ನೋಡಲು. ರಾಹುತನು ಯೇಹುವನ್ನು ಎದುರುಗೊಂಡನು. ಯೇಹುವು ಆತನಿಗೆ "ನನ್ನ ಹಿಂದೆ ಬಾ" (ವಚನ 19) ಎಂದನು ಮತ್ತು ಆತನು ಹೀಗೆ ಮಾಡಿದನು. ಎರಡನೆಯ ರಾಹುತನನ್ನು ಹೊರಗೆ ಕಳುಹಿಸಲಾಯಿತು; ಆತನೂ ಸಹ ತನ್ನ ಸವಾರಿಯನ್ನು ಯೇಹುವನ್ನು ಹಿಂದೆ ಕೊನೆಗೊಳಿಸಿದನು. ಯೇಹುವು ಪಟ್ಟಣದ ಹತ್ತಿರಕ್ಕೆ ಬರಲು ಕಾವಲುಗಾರನು "ಎರಡನೆಯವನೂ ಆ ಗುಂಪನ್ನು ಮುಟ್ಟಿದನು; ಆದರೆ ಹಿಂದಿರುಗಿ ಬರುವದು ಕಾಣಿಸುವುದೇ ಇಲ್ಲ. ರಥದಲ್ಲಿ ಕೂತಿರುವವನು ಕುದುರೆಗಳನ್ನು ಹುಚ್ಚು ಹಿಡಿದಂತೆ ಓಡಿಸುವುದನ್ನು

ನೋಡಿದರೆ ನೀಂಷಿಯ ಮೊಮ್ಮಗನಾದ ಯೇಹುವಾಗಿರಬೇಕು'' ಎಂದು ಉತ್ತರಿಸಿದನು (ವಚನ 20).

ಯೋರಾಮ ಮತ್ತು ಯುದಾಯದ ಅರಸನಾದ ಅಹಜ್ಯನೂ ಯೇಹುವನ್ನು ಸಂಧಿಸಿದರು. ಅವರು ಎಲ್ಲಿ ಭೇಟಿಯಾದರು ಎಂಬುದನ್ನು ಗಮನಿಸಿರಿ: "ಅವರು ... ಇಜ್ರೇಲಿನವನಾದ ನಾಬೋತನ ಹೊಲದಲ್ಲಿ ಸಂಧಿಸಿದರು'' (ವಚನ 21). ಹೊರತು ಇಸ್ರೇಲಿನ ಅರಸನ ಆಸ್ತಿಯಲ್ಲಿ ಅಲ್ಲ. ದೇವದೃಷ್ಟಿಯಲ್ಲಿ ಗಮನಿಸುವುದಾದರೆ ಇದು ನಾಬೋತನ ಆಸ್ತಿಯಾಗಿತ್ತು; ನಿಯಮದ ಪ್ರಕಾರ ಆಸ್ತಿಯು ಯಾರಿಗೆ ಕೊಡಲ್ಪಟ್ಟಿದೆಯೋ ಆ ಕುಟುಂಬವನ್ನು ಬಿಡಬಾರದು ಎಂದು ಆಜ್ಞೆಯು ಹೇಳುತ್ತದೆ.

ಯೇಹುವು ಯೋರಾಮನನ್ನು ಕೊಂದನು ಮತ್ತು ಪಟ್ಟಣದೊಳಕ್ಕೆ ಹೋದನು. ಈಜೆಬೆಲಳು ಏನು ಸಂಭವಿಸುತ್ತದೆ ಎಂಬುದನ್ನು ಕೇಳಿದಳು ಮತ್ತು "ತಲೆಯನ್ನು ಆಭರಣಗಳಿಂದ ಅಲಂಕರಿಸಿಕೊಂಡು ಅವಳು ತನ್ನ ಕಣ್ಣಿಗೆ ಕಾಡಿಗೆ ಹಚ್ಚಿಕೊಂಡು ಕಿಟಕಿಯಿಂದ ನೋಡುತ್ತಾ ನಿಂತಳು'' (ವಚನ 30).

> ಆನಂತರ ಅರಮನೆಯ ಪ್ರಕಾರದೊಳಗೆ ಬಂದ ಯೇಹುವನ್ನು ಕಂಡು ಅವನನ್ನು - ಯಜಮಾನನ್ನು ಕೊಂದ ಜಿಮ್ರಿಗೆ ಸಮಾನನೇ, ಕ್ಷೇಮವೋ ಎಂದು ಕೇಳಿದಳು. ಅವನು ಕಣ್ಣೆತ್ತಿ ಕಿಟಕಿಯ ಕಡೆಗೆ ನೋಡಿ - ಅಲ್ಲಿ ನನ್ನ ಪಕ್ಷದವರು ಯಾರು ಎಂದು ಕೂಗಿದನು. ಕೂಡಲೆ ಮೂವರು ಕಂಚುಕಿಗಳು ಅವನ ಕಡೆಗೆ ನೋಡಿದರು. ಅವನು ಅವರಿಗೆ - ಆಕೆಯನ್ನು ಕೆಳಗೆ ದೊಬ್ಬಿರಿ ಎಂದು ಆಜ್ಞಾಪಿಸಲು ಅವರು ದೊಬ್ಬಿದರು. ಆಕೆಯ ರಕ್ತವು ಗೋಡೆಗೂ ಕುದುರೆಗಳಿಗೂ ಸಿಡಿಯಿತು. ಆವನು ಆಕೆಯ ಶವವನ್ನು ತುಳಿಸಿಬಿಟ್ಟನು. ಆನಂತರ ಅವನು ಅರಮನೆಗೆ ಹೋಗಿ ಅನ್ನಪಾನಗಳನ್ನು ತೆಗೆದುಕೊಂಡು ತನ್ನ ಸೇವಕರಿಗೆ - ಆ ಶಾಪಗ್ರಸ್ತ ಸ್ತ್ರೀಯ ಶವವನ್ನು ನೋಡಿಕೊಂಡು ಸಮಾಧಿಮಾಡಿರಿ; ಆಕೆಯು ರಾಜಪುತ್ರಿಯಾಗಿರುತ್ತಾಳಷ್ಟೇ ಎಂದು ಆಜ್ಞಾಪಿಸಿದನು. ಸೇವಕರು ಶವವನ್ನು ಸಮಾಧಿಮಾಡುವುದಕ್ಕಾಗಿ ಹೋದರು; ಆದರೆ ಅವರಿಗೆ ಆಕೆಯ ತಲೆಬುರುಡೆ, ಕೈಕಾಲುಗಳು ಹೊರತಾಗಿ ಬೇರೇನೂ ಸಿಕ್ಕಲಿಲ್ಲ. ಅವರು ಹಿಂದುರುಗಿ ಯೇಹುವಿನ ಹತ್ತಿರ ಬಂದು ಆ ಸಂಗತಿಯನ್ನು ತಿಳಿಸಲು ಅವನು ಅವರಿಗೆ - ನಾಯಿಗಳು ಇಜೆಬೇಲಳ ದೇಹಮಾಂಸವನ್ನು ಇಜ್ರೇಲಿನ ಹೊಲದಲ್ಲಿ ತಿಂದುಬಿಡುವವು ಆಕೆಯ ಶವವು ಹೊಲಕ್ಕೆಗೊಬ್ಬರವಾಗುದು; ಇದು ಈಜೆಬೆಲಳ ಶವವೆಂದು ಯಾರಿಗೂ ಗುರುತು ಸಿಕ್ಕಿದ ಹಾಗಾಗುವದು ಎಂಬುದಾಗಿ ಯೆಹೋವನು ತಿಷ್ಬೀಯನೂ ತನ್ನ ಸೇವಕನೂ ಆದ ಎಲೀಯನ ಮುಖಾಂತರ ಹೇಳಿಸಿದ ಮಾತು ಈಗ ನೆರವೇರಿತು (ವಚನಗಳು 31-36).

ಬೈಬಲ್ ಅಂಥ ಸಂಗತಿಗಳನ್ನು ನಮಗೆ ಏಕೆ ಹೇಳುವದು? "ಇದು ಅಸಹ್ಯ ತರುವಂಥದ್ದಾಗಿದೆ!'' ಎಂದು ಕೆಲವರು ಹೇಳಬಹುದು. ಇದು ಸುಂದರವಾದ ದೃಷ್ಯವಾಗಿ ರಲಿಲ್ಲ, ಆದರೆ ಪಾಪದ ಪರಿಣಾಮಗಳು ಎಂದಿಗೂ ಸುಂದರವಾಗಿರಲಾರವು. ಎಲ್ಲದಕ್ಕೂ ಪಾಪವೇ ಕಾರಣ ಎಂಬುದನ್ನು ನೀನು ತಿಳಿಯಬಯಸಿದ್ದಾದರೆ, ಆಹಾಬನ ದಂತದ ಅರಮನೆಯ ಹತ್ತಿರ ನೋಡಬೇಡ, ಆದರೆ ನಾಯಿಗಳು ಆತನ ರಕ್ತವನ್ನು ನೆಕ್ಕುವತ್ತ ನೋಡು. ಈಜೆಬೆಲಳ ರತ್ನಗಳ ಮತ್ತು ಸುಂದರವಾದ ಬಟ್ಟೆಗಳೆಡೆಗೆ ನೋಡಬೇಡ ಆದರೆ ಅವಳ ಉಬ್ಬಿದ ಹೊಟ್ಟೆಯೊಡನೆ ಇರುವ ನಾಯಿಗಳನ್ನು ನೋಡಿರಿ. ಉತ್ಸಾಹಪೂರ್ವಕವಾಗಿ ಹೊಗಳುವ ಪಾನೀಯಗಳತ್ತ ನೋಡದಿರು, ಆದರೆ ಮುಖ್ಯ ರಸ್ತೆಯ ಮೇಲೆ ಮುರಿದುಬಿದ್ದಿರುವ ಯೌವನಸ್ಥರ ದೇಹಗಳತ್ತ ನೋಡಿರಿ. ಲೈಂಗಿಕ ಅನೈತಿಕತೆಯನ್ನು ವೈಭವೀಕರಿಸುವ ಚಲನಚಿತ್ರಗಳನ್ನು ನೋಡದಿರಿ, ಆದರೆ ಅಂಟುಜಾಡ್ಯದಂತಿರುವ ಏಡ್ಸನಿಂದಾಗುವ ಭಯಂಕರತೆಯತ್ತ ನೋಡಿರಿ!

# ಮುಕ್ತಾಯ

ಆಹಾಬ ಮತ್ತು ಈಜೆಬೆಲರ ಕಥೆಯು ದುಃಖಕರವಾದದ್ದು, ಆದರೆ ಇದು ಕೇವಲ ದುಃಖಕರವಾದದ್ದೆ ಅಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ಇದನ್ನು ದೇವರು ನಮಗೆ ಕೊಟ್ಟಂತೆ ಈ ಪಾಠಗಳನ್ನು ನಾವು ಮನದಟ್ಟು ಮಾಡಿಕೊಳ್ಳುವಾ:

ಮೊದಲು, ದೇವರ ತಾಳ್ಮೆಗೂ ಒಂದು ಕೊನೆಯಿದೆ, ಮತ್ತು ಅದು ಯಾವಾಗ ಬರುವುದು ಎಂದು ಯಾರೊಬ್ಬರಿಗೂ ತಿಳಿದಿರಲಾರದು. ದೇವರ ಕರುಣೆ ಮತ್ತು ಪ್ರೀತಿಯ ಕರುಣೆಯನ್ನು ತಿರಸ್ಕರಿಸುವಂತ ಅಪಾಯಕಾರಿಯಾದಂಥದ್ದು ಮತ್ತೊಂದಿಲ್ಲ. ನಮ್ಮ ಹಿಂದಿನ ಪಾಠದಲ್ಲಿ ವಿವರಿಸಿದಂತೆ ಒಬ್ಬನು "ತಿರುಗಿ ಬಾರದಂಥದಕ್ಕೆ" ಯಾವಾಗ ತಲುಪುತ್ತಾನೊ ನಾನರಿಯೆನು. ಇದು ಸಾಧ್ಯವಿದೆ, ಹೇಗೋ, ಕೆಲವು ಅಪಾಯಕಾರಕವಾದ ಸಂಗತಿಗಳ ಹತ್ತಿರ ಇರುವ ಸಾಧ್ಯತೆಯು ಇದೆ. ಮತ್ತು ಇನ್ನೂ ಕೆಲವರು ಬಹುಶಃ ದಾಟಿಹೋದವರೂ ಇದ್ದಾರೆ.

ಎರಡನೆಯದಾಗಿ, ದೇವರ ವಾಗ್ದಾನಗಳು ಖಚಿತವಾದವುಗಳು - ಮತ್ತು ಯಾರೊಬ್ಬರೂ ಅವುಗಳನ್ನು ಬದಲಿಸಲಾರರು. ದೇವರು ಏನನ್ನಾದರೂ ಹೇಳಿದ್ದಾದರೆ, ಅದು ಅದೇ ಆಗಿದೆ. ನಾವು ಹೀಗೆ ಯೋಚಿಸಬಹುದು, "ಖಚಿತವಾ ಗಿಯೂ ಇದು ಆಗದು" ಆದರೆ ದೇವರು ಹೀಗೆ ಹೇಳಬಹುದಾದರೆ ನೀನು ಅದನ್ನು ಎಣಿಸಲಾರಿ. ಕೆಲವರು ಇದನ್ನು ಪ್ರತಿರೋಧಿಸಬಹುದು, "ನಾನು ಆಹಾಬ ಮತ್ತು ಈಜೆಬೆಲಳರಂತಲ್ಲ" ಎಂದು. ಇದು ನಿಜವಾದ ವಿಷಯವಲ್ಲ. ನೀನು ಪಾಪಿಯಾಗಿದ್ದಿ (ರೋಮಾಪುರ 3:23), ಮತ್ತು ಪಾಪಿಗಳಿಗಾಗಿ ದೇವರ ವಾಗ್ದಾನವು ಸ್ಪಷ್ಟವಾಗಿದೆ: "ಪಾಪವು ಕೊಡುವ ಸಂಬಳ ಮರಣ" (ರೋಮಾಪುರ 6:23). ಇದನ್ನು ನಂಬಿರಿ ಮತ್ತು ಕರುಣೆಗಾಗಿ ಕರ್ತನೆಡೆಗೆ ಓಡಿಹೋಗಿರಿ!

ಮೂರನೆಯದಾಗಿ, ದೇವರ ಪುನರುಚ್ಚಾರವು ಯಾವಾಗಲೂ ಕರುಣೆಯನ್ನು ಒಳಗೊಂಡಿದೆ, ಮತ್ತು ಯಾವೊಬ್ಬ ಮನುಷ್ಯನೂ ಇದನ್ನು ತಿರಸ್ಕರಿಸಬಾರದು. ದೇವರ ವಾಗ್ದಾನಗಳು, ಅವು ಆಶೀರ್ವಾದಗಳಾಗಿರಲಿ ಅಥವಾ ಶಾಪವಾಗಿರಲಿ, ಯಾವಾಗಲೂ ಶರತ್ತುಗಳನ್ನು ಹೊಂದಿದ್ದು, ಅವು ಹೇಳಿಕೆಗಳಾಗಿವೆ ಅಥವಾ ಸೂಚಿತವಾದವುಗಳಾಗಿವೆ. ಮೂರು ವರ್ಷಗಳವರೆಗೆ ಕಠಿಣ ಹೃದಯಿಯಾದ ಆಹಾಬನು ಪಶ್ಚಾತ್ತಾಪದಿಂದಾಗಿ ಆಹಾಬನ ಭಾಗದಲ್ಲಿನ ದೇವರ ಕೋಪವು ಅನಿರ್ಧಿಷ್ಟ ಕಾಲದವರೆಗೆ ತಡೆಹಿಹಿಯಲ್ಪಟ್ಟಿತು. ದೇವರ ಕರುಣೆಯಿಂದ ಎಚ್ಚರವಾಗಿರು, ಮತ್ತು ದೇವರ ಆಶೀರ್ವಾದಗಳನ್ನು ಬೇಡಿರಿ.

ದೇವರ ತಾಳ್ಮೆಯು ನಿಮ್ಮನ್ನು ಬಿಟ್ಟು ಹೋಗಗೊಡದಿರಿ!

*ಲೇಖಕರ ಟಿಪ್ಪಣಿ: ಆಹಾಬ ಮತ್ತು ಈಜೆಬೆಲಳರನ್ನು ಆಧರಿಸಿದ ಆರ್. ಜಿ. ಲೀ. "ಕೆಲದಿನ ಕೊಡುವುದು ದಿನ" ಎಂಬ ಬೋಧನೆಯನ್ನು ಬೋಧಿಸಿದರು. ನಾನು ಈ ಬೋಧನೆಗೆ ಋಣ ಬದ್ಧವಾಗಿದ್ದು ಅದರಲ್ಲಿನ ಕೆಲ ಉದಾಹರಣೆಗಳನ್ನು ಈ ಪಾಠದಲ್ಲಿ ಉಪಯೋಗಿಸಿದ್ದೇನೆ.*

---

ಟಿಪ್ಪಣೆಗಳು

[1]ಇದೇ ರೀತಿಯ ತತ್ವದ ಬಗೆಗೆ ಇನ್ನೊಂದು ಪರಿಚ್ಛೇದವು ಮಾತನಾಡುತ್ತದೆ ಮತ್ತು ಜ್ಞಾನೋಕ್ತಿ 6ರಲ್ಲಿ ಈ ಪದವು "ತಟ್ಟನೆ" ಎಂದು ಸಹ ಬಳಸಲ್ಪಟ್ಟಿದೆ. ವಚನ 12 ಮತ್ತು ಮುಂದಿನ ಕೆಲವಚನಗಳು "ದುಷ್ಟಮನುಷ್ಯನ" ಗುಣಲಕ್ಷಣಗಳ ಬಗೆಗೆ ಮಾತನಾಡುತ್ತವೆ; ನಂತರ ವಚನ 15 ಆತನ ಹಣೆಬರಹವನ್ನು ಹೇಳುತ್ತದೆ: "ಆದ ಕಾರಣ ಅವನಿಗೆ ತಟ್ಟನೆ ವಿಪತ್ತು ಸಂಭವಿಸುವದು, ಏಳದ ಹಾಗೆ ಫಕ್ಕನೇ ಮುರಿಯುವನು!" [2]ಇಂದು ಆ ಪಟ್ಟಣಗಳ ಖಚಿತವಾದ ನೆಲೆಯ ಬಗೆಗೆ ನಮಗೆ ಖಚಿತವಿಲ್ಲ. [3]ಅನೇಕ ಹೊಸ ಒಡಂಬಡಿಕೆಯ ವಿವರಣೆಗಳೂ ಸಹ ಈ ತತ್ವವನ್ನು ಪ್ರತಿಫಲಿಸುತ್ತವೆ: "ದೇವರು ಅವರಿಗೆ (ಅನ್ಯ ಜನಾಂಗಗಳಿಗೆ) ಒಪ್ಪಿಸಿದನು" (ರೋಮಾಪುರ 1:24, 26, 28). (KJV ಯಲ್ಲಿ ಇನ್ನೂ ಹೆಚ್ಚಿನ ಚಿತ್ರಮಯ ಅಂಶಗಳಿವೆ "ದೇವರು ಅವರನ್ನು ಒಪ್ಪಿಸಿದನು ಯಾಕೆಂದರೆ ಅವರು ದೇವರನ್ನು ಬಿಟ್ಟುಬಿಟ್ಟಿದ್ದರು.") ಕೆಲವರು ಕಲ್ಲು ಹೃದಯದಿಂದ ಬಿದ್ದು ಹೋಗುತ್ತಾರೆ "ಅವರಲ್ಲಿ

ಮಾನಸಾಂತರ ಹುಟ್ಟಿಸುವುದು ಅಸಾಧ್ಯ" (ಇಬ್ರಿಯ 6:6). ಮೊದಲ ಯೋಹಾನ 5:16 ಹೇಳುವದೇನೆಂದರೆ "ಪಾಪವು ಮರಣದೆಡೆಗೆ ನಡೆಸುತ್ತದೆ." [4]ಒದಗಿಸಲ್ಪಟ್ಟ ಪಾಠಗಳನ್ನು ನೋಡಿರಿ. [5]ಅಧಿಕಾರಿಗಳು ಸರಿಯಾಗಿ ಪಟ್ಟಣಗಳ ಭಾಗವಿರುವುದರ ಮೇಲೆ ವ್ಯತ್ಯಾಸವಾಗುತ್ತದೆ. [6]ನೋಡಿರಿ. ಅರಣ್ಯಕಾಂಡ 36:1-9; 27:1-11. [7]1 ಅರಸು 22:39; ನೋಡಿರಿ ಕೀರ್ತನೆ 45:8; ಆಮೋಸ 3:15. [8]ಆಮೋಸ 6:4 ನೋಡಿರಿ. [9]ಇದು ಬಹುಶಃ ಬಿಳಿ ಅಮೃತಶಿಲೆಯಾಗಿರಬೇಕು, ಇದು ದಂತ ವರ್ಣವನ್ನು ಹೋಲುತ್ತಿತ್ತು. [10]KJVಯಲ್ಲಿ ಇದರ ವೇದಭಾಗದ ಅಕ್ಷರಶಃ ಸಹ ಭಾಷಾಂತರಗಳಿಂದ ಇದನ್ನು ಎರವಲು ಪಡೆಯಲಾಯಿತು.

[11]ವಚನ 19ನ್ನು ನೋಡಿರಿ. [12]ಇದು ದೇವರ ನಿಯಮವಲ್ಲ, ಆದರೆ ಪೂರ್ವದ ಹತ್ತಿರದಲ್ಲಿನ ಪ್ರಾಚೀನ ಸಾಂಪ್ರದಾಯಿಕ ನಿಯಮಗಳಾಗಿದ್ದವು. [13]Clyde M. Miller, *Living Word Commentary on First and Second Kings* (Abilene, Tex.: ACU Press, 1991), 298. [14]ಪ್ರಸಂಗಿ 8:11.

---

## ಪಾಠದ ರೂಪುರೇಷೆ

**ಪರಿಚಯ**

A. ನಾವು ದೇವರ ಪ್ರೀತಿ ಮತ್ತು ತಾಳ್ಮೆಯ ಮೇಲಿನ ಪಾಠಗಳನ್ನು ಆನಂದಿಸುತ್ತಿರುತ್ತೇವೆ, ಆದರೆ ನಾವು ದೇವರ ನ್ಯಾಯ ಮತ್ತು ಪವಿತ್ರತೆಯ ಬಗೆಗೆ ಬೋಧಿಸದೇ, ನಾವು ದೇವರ ಸಂಪೂರ್ಣ ಸಂಕಲ್ಪವನ್ನು (ಅಪೊಸ್ತಲರ ಕೃತ್ಯಗಳು 20:27) ಬೋಧಿಸಲಾರೆವು ಇದು ಪಾಪವನ್ನು ಸಹಿಸದ ದೇವರ ಭಾಗವಾಗಿದೆ. ಎಲೀಯನ ಬಗೆಗೆ ನಮ್ಮ ಸರಣಿಗಳು ಆ ಸ್ವಭಾವವನ್ನು ತೋರಿಸುತ್ತದೆ.

B. 1 ಅರಸು 21ಕ್ಕೆ ಹೋಗವ ಮುನ್ನ, ನಾವು ದೃಷ್ಟಾಂತಿಕರಿಸಿದ ತತ್ವವನ್ನು ಸಂಸ್ಥಾಪಿಸೋಣ:
   1. ಹಳೆ ಒಡಂಬಡಿಕೆಯ ಪರಿಚ್ಛೇದಗಳು: ಜ್ಞಾನೋಕ್ತಿ 29:1; 6:12, 15
   2. ದೃಷ್ಟಾಂತಗಳು:
      a. ಸೋದೋಮ ಮತ್ತು ಗೋಮಾರ (ಆದಿಕಾಂಡ 19)
      b. ಇಸ್ರಾಯೇಲು ಮತ್ತು ಯುದಾಯ ರಾಜ್ಯಗಳು (2 ಪೂರ್ವಕಾಲವೃತ್ತಾಂತ 36)
      c. ಬೆಲ್ಶಚ್ಚರ್ (ದಾನಿಯೇಲ 5)
      d. ಅಗ್ರಿಪ್ಪದ ಹೆರೋದ (ಅಪೊಸ್ತಲರ ಕೃತ್ಯಗಳು 12; ಗಮನಿಸಿ ವಚನ 23)
   3. ಹೊಸ ಒಡಂಬಡಿಕೆಯ ವಿವರಣೆಗಳು (ರೋಮಾಪುರ 1; ಇಬ್ರಿಯ 6; 1 ಯೋಹಾನ 5)

C. ನಾವು ಆಹಾಬ ಮತ್ತು ಈಜೆಬೆಲರ ಕೆಟ್ಟತನವನ್ನು ನೋಡಿದೆವು. ಈಗ ನಾವು ವೇದ ಭಾಗದಲ್ಲಿನ ಅತಿ ನೀಚಕಾರ್ಯದ ಕಡೆ ನೋಡುವಾ ಮತ್ತು ದೇವರು "ಇಷ್ಟು ಸಾಕು" ಎಂದು ದೇವರು ಹೇಳುವುದನ್ನೂ ನೋಡುವಾ!

I. ನಾಬೋತನ ವಿರುದ್ಧದ ಪಾಪ (21:1-16)
   A. "ಅನಂತರ ಸಂಭವಿಸಿದ್ದೇನೆಂದರೆ" (ವಚನ 1ಎ):
      1. ಎಲೀಯನು ಆ ಪ್ರದೇಶದಿಂದ ಕಾಣೆಯಾದನು
      2. ಆಹಾಬನು ಮತ್ತು ಇಸ್ರಾಯೇಲ್ಯರು ತಮ್ಮ ಸಹಜಕಾರ್ಯಗಳಿಗೆ ಹಿಂದಿರುಗಿದರು
   B. ಆಹಾಬನಿಗೆ ಹೊಲವೊಂದು ಬೇಕಿತ್ತು, ಮತ್ತು ನಾಬೋತನು ಅದನ್ನು ಅವನಿಗೆ ತೆಗೆದುಕೊಳ್ಳಲು ಬಿಡಲಿಲ್ಲ.

1. ವಚನ 1ಔ: ರಾಜಧಾನಿಯಾದ ಸಮಾರ್ಯವು ಇಜ್ರೇಲಿನ ದಕ್ಷಿಣದಿಂದ ಮೂವತ್ತೈದು ನಾಲ್ವತ್ತು ಮೈಲಿ ದೂರದಲ್ಲಿತ್ತು, ಆದರೆ ಆಹಾಬನು ಇಜ್ರೇಲಿನಲ್ಲಿ ಇದ್ದನು.
2. ವಚನ 2: ಆಹಾಬನಿಗೆ ನಾಬೋತನ ದ್ರಾಕ್ಷೇತೋಟವು ಬೇಕಿತ್ತು. ಆದರೆ ಇಸ್ರಾಯೇಲ್ಯರು ಕಾನಾನಿಗೆ ಹೋದಾಗ ಭೂಮಿಯು ಕುಲಗಳಿಗೆ ಕುಟುಂಬಗಳಿಗೆ ಹಂಚಿಹೋಗಿತ್ತು, ಮತ್ತು ಆ ಭೂಮಿಯು ಆ ಕುಟುಂಬದೊಂದಿಗೆಯೇ ಇರುತ್ತಿತ್ತು (ಯಾಜಕಕಾಂಡ 25).
3. ವಚನ 3: ನಾಬೋತನೂ ಸಹ ಬಾಳನಿಗೆ ಅಡ್ಡಬೀಳದ ಏಳು ಸಾವಿರ ಇಸ್ರಾಯೇಲ್ಯರಲ್ಲಿ ಒಬ್ಬನು.
4. ವಚನ 4: ಆಹಾಬನು ಮುನಿಸುಗೊಂಡನು ಯಾಕೆಂದರೆ ಆತನಿಗೆ ದ್ರಾಕ್ಷೇತೋಟವು ಸಿಗದೆ ಇದ್ದುದರಿಂದ.
5. ವಚನ 5: ಈಜೆಬೆಲಳ ಸಮಸ್ಯೆಯು ಏನೆಂದು ಗೊತ್ತಾಯಿತು.
6. ವಚನ 6: ಆಹಾಬನು "ದುಃಖದ ಕಥೆಯು ತಿಳಿಯುತ್ತದೆ."
7. ವಚನ 7: ಈಜೆಬೆಲಳು ತನ್ನ ಗಂಡನನ್ನು ಕೆಣಕಿದಳು ಮತ್ತು "ನಾನು ಅದನ್ನು ನೋಡಿಕೊಳ್ಳುವೆ" ಎಂದು ಹೇಳಿದಳು.

C. ಹೊಲವನ್ನು ಪಡೆಯಲು ದೇವರ ನಿಯಮವನ್ನು ತಿರುಚುವ ಕುತಂತ್ರವನ್ನು ಮಾಡಿದಳು.
   1. ವಚನ 9:
      a. ಉಪವಾಸವು ಘೋಷಿಸಲ್ಪಟ್ಟಿತು. ನಿಯಮ 1: ಉಪವಾಸವನ್ನು ಘೋಷಿಸುವದು ದೇವರ ಕೋಪದಿಂದ ತಪ್ಪಿಸಿಕೊಳ್ಳಲು.
      b. ನಾಬೋತನು "ಜನರೊಳಗೆ" ಗೌರವಸ್ಥಾನವನ್ನು ಪಡೆದವನಾಗಿದ್ದನು. ನಿಯಮ 2: ಎಲ್ಲಾ ಜನರು ಉಪವಾಸದಲ್ಲಿ ಪಾಲ್ಗೊಳ್ಳಬೇಕು.
   2. ವಚನ 10:
      a. ಅಯೋಗ್ಯ ಜನರು ನಾಬೋತನ ವಿರುದ್ಧ ಸುಳ್ಳುಹೇಳಲು ವಂಚನೆಗೆ ಒಳಗಾದರು. ನಿಯಮ 3: ಎರಡು ಅಥವಾ ಮೂರು ಸಾಕ್ಷಿಗಳನ್ನು ಹೊಂದಿರಿ.
      b. ಅವರು ನಾಬೋತನ ಮೇಲೆ ದೇವದೂಷಣೆಯ ಅಪವಾದವನ್ನು ಹೊರೆಸಿದರು. ನಿಯಮ 4: ದೇವದೂಷಣೆಗೆ ಮರಣವೇ ಶಿಕ್ಷೆಯು ಆಗಿತ್ತು. ನಿಯಮ 5: ಇದು ಮರಣಹೊಂದುವವರೆಗೂ ಕಲ್ಲೆಸೆಯುವುದೇ ಆಗಿತ್ತು.

D. ನಾಬೋತನು ಕೊಲ್ಲಲ್ಪಟ್ಟನು, ಮತು ಈಜೆಬೆಲ ಹಾಗೂ ಆಹಾಬರು ಸಂತೋಷದಿಂದಿದ್ದರು.
   1. ನಾಬೋತನು ಕೊಲ್ಲಲ್ಪಟ್ಟನು (ತನ್ನ ಸಂತಾನದೊಡನೆ; ನೋಡಿರಿ 2 ಅರಸು 9:26).
   2 ವಚನ 14: ಆ ಸಂದೇಶವು ಈಜೆಬೆಲಳಿಗೆ ಕಳುಹಿಸಲ್ಪಟ್ಟಿತು.
   3. ವಚನ 15: ಆಕೆಯು ಅದನ್ನು ಆಹಾಬನಿಗೆ ಹೇಳಿದಳು.
   4. ವಚನ 16: ಆಹಾನು ತಿರುಗಿ ಸಂತುಷ್ಟನಾದನು.

II. ದೇವರ ತಾಳ್ಮೆಯು ಮುಗಿದು ಹೋಯಿತು (21:17-24, 27-29; 22:38; 2 ಅರಸು 9:21-36).

A. ಎಲೀಯನು ದೇವರ ಸಂದೇಶವನ್ನು ಅರುಹಿದನು.
   1. ವಚನ 17-19: ಕರ್ತನ ವಾಕ್ಯವು ತಿರುಗಿ ಎಲೀಯನಿಗಾಯಿತು.
   2. ವಚನ 20-24: ಎಲೀಯನು ಆಹಾಬನನ್ನು ಕಂಡನು ಮತ್ತು ಕರ್ತನ ಸಂದೇಶವನ್ನು ಬಿಡುಗಡೆ ಮಾಡಿದನು.
      a. ನಾಯಿಗಳು ನಾಬೋತನ ರಕ್ತವನ್ನು ಎಲ್ಲಿ ನೆಕ್ಕಿದವೋ ಅಲ್ಲಿಯೇ ಆಹಾಬನ ರಕ್ತವನ್ನೂ ನೆಕ್ಕುವವು (ನೋಡಿರಿ ವಚನ 19).
      b. ನಾಯಿಗಳು ಇಜ್ರೇಲಿನಲ್ಲಿ ಈಜೆಬೆಲಳನ್ನು ತಿನ್ನುವವು (ವಚನ 23).
      c. ಯೇಹುವನ್ನು ಒಳಗೊಂಡು ಇತರರೂ ಅಲ್ಲಿ ಉಪಸ್ಥಿತರಿದ್ದರು (2 ಅರಸು 9:25). ಈ ದೃಶ್ಯವು ಮತ್ತು ಸಂದೇಶವು ಅಳಿಯದಂತೆ ಯೇಹು ವಿನ ಮನದಲ್ಲಿ ಚಿತ್ರಿತವಾಗಿತ್ತು.
   3. ವಚನ 27-29: ಅತ್ಯಾಶ್ಚರ್ಯ! ಆಹಾಬನು ಭಯಬಿದ್ದನು ಮತ್ತು ತನ್ನನ್ನು ತಾನು ತಗ್ಗಿಸಿಕೊಂಡನು, ಅನೇಕ ವರ್ಷಗಳವರೆಗೆ ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದರಲ್ಲಿ ಗೆದ್ದುಕೊಂಡನು.

B. ದುರದೃಷ್ಟವಾಶಾತ್, ಆಹಾಬನ ಪಶ್ಚಾತ್ತಾಪವು ಅಲ್ಪಕಾಲಾವಧಿಯನ್ನು ಹೊಂದಿತ್ತು. ಆಹಾಬನಿಗೆ ಏನೂ ಸಂಭವಿಸಲಿಲ್ಲ, ಮತ್ತು ಆತನು ತನ್ನ ಹಿಂದಿನ ಮಾರ್ಗಗಳತ್ತ ತಿರುಗಿಕೊಂಡನು (ಗಮನಿಸಿರಿ ಪ್ರಸಂಗಿ 8:11).

C. ದೇವರ ಬೆದರಿಕೆಯ ಕಾರ್ಯದ ವಾಗ್ದಾನವು ಸಂಪೂರ್ಣವಾಗಿತು.
   1. ಆಹಾಬ (1 ಅರಸು 22)
      a. ಆಹಾಬನು ವೇಶಬದಲಿಸಿಕೊಂಡು ಯುದ್ಧಕ್ಕೆ ಹೊರಟನು, ಗುರಿಯಿಲ್ಲದ ಬಾಣಬಿಡುವವನ ಬಾಣವು ಆಹಾಬನ ಯುದ್ಧ ಕವಚವನ್ನು ಸೀಳಿತು.
      b. ವಚನ 38: ದೇವರ ವಾಗ್ದಾನ ಸತ್ಯವಾಗಿತ್ತು.
   2. ಈಜೆಬೆಲಳು (2 ಅರಸು 9)
      a. ಇಪ್ಪತ್ತು ವರ್ಷಗಳು ಸಂದವು. ಎಲೀಯನ ಬದಲಾಗಿ ಎಲೀಷನು ಬಂದನು. ಆಹಾಬನ ಮಗನಾದ ಯೆಹೋರಾಮನು ಪಟ್ಟಕ್ಕೆ ಬಂದನು, ಮತ್ತು ಈಜೆಬೆಲಳು ತಾಯಿಯಾದ ಅಧಾರ್ಮಿಕವಾದ ರಾಣಿಯಾಗಿದ್ದಳು. ಇದು ಆಹಾಬ ಮತ್ತು ಈಜೆಬೆಲರ ಕಥೆಯ ಸಮಾರೋಪದ ಸಮಯವಾಗಿದೆ.
      b. 2 ಅರಸು 9:21, 25, 26, 30-36ನ್ನು ಓದಿರಿ. ಎಂಥ ದುಃಖಕರವಾದ, ದುಃಖದ ಕಥೆ ಇದು!

**ಮುಕ್ತಾಯ**

A. ನಾವು ಈ ಕಥೆಯನ್ನು ಕಲಿಯಬೇಕೆಂದು ದೇವರು ಬಯಸುವವನಾಗಿದ್ದಾನೆ:
   1. ದೇವರ ತಾಳ್ಮೆಗೆ ಒಂದು ಮಿತಿಯು ಇದೆ - ಮತ್ತು ಇದು ಯಾವಾಗ ಬರುವುದು ಎಂದು ಯಾರಿಗೂ ತಿಳಿಯದು.
   2. ದೇವರ ವಾಗ್ದಾನವು ಖಚಿತವಾದವು - ಮತ್ತು ಯಾರೊಬ್ಬರೂ ಅವುಗಳನ್ನು ಬದಲಾಯಿಸಲಾರರು.
   3. ದೇವರ ಕರುಣೆಯನ್ನು ಒಳಗೊಂಡ ಘೋಷಣೆ - ಮತ್ತು ಇದನ್ನು ನಿರಾಕರಿಸಲಾರರು.

B. ದೇವರು ಕರುಣೆಯುಳ್ಳ ದೇವರು ಎಂಬುದನ್ನು ನಾವು ಮರೆಯಬಾರದು.


ಎಲೀಯನ
ದಿನದಲ್ಲಿ
ಸಿದೋನ್
ಚಾರೆಪ್ತಾ
ತೈರ್
ದಮಸ್ಕ
ಸಿರಿಯ
(ಆರಾಮ್)
ಕಾರ್ಮೆಲ ಬೆಟ್ಟ
ಅಫೇಕ್
ಇಜ್ರೇಲ್
ಗಿಲಾದ್
ರಾಮೋತ್-
ಗಿಲಾದ್
ತೀರ್ಚಾ?
ಸಮಾರ್ಯ
ಯೊರ್ದಾನ್ ನದಿ
ಕೇರಿತ್
ಬುಗ್ಗೆ
ತಿಷ್ಬೀಯ?
ಇಸ್ರಾಯೇಲ್
ಬೇತೆಲ್
ಗಿಲ್‌ಗಾಲ್?
ಯೆರಿಕೊ
ಮಹಾ ಸಮುದ್ರ
ಯೂದ
ಫಿಲಿಷ್ಟಿಯ
ಮೃತ
ಸಮುದ್ರ
ಬೆರ್ಷೆಬಾ
ಮೋವಾಬ್
ಹೆರೋಬ್
(ಸಿನಾಯ್)